# ತೇರು

**ಡಾ. ಚಿಂತಾಮಣಿ ಕೊಡ್ಲೆಕೆರೆ**

ರಾಘವೇಂದ್ರ ಪಾಟೀಲರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದುಕೊಟ್ಟಿರುವ 'ತೇರು' (೨೦೦೩) ಅವರ ಸಾಹಿತ್ಯದ ಬಹು ಮುಖ್ಯ ಸೃಷ್ಟಿಗಳಲ್ಲಿ ಒಂದಾಗಿದೆ. ಪಾಟೀಲರ 'ದೇಸಗತಿ', 'ಕರೀಟೊಪಗಿ' ಮುಂತಾದ ಕಥೆಗಳಲ್ಲಿ ಚಿತ್ರಿತವಾದ, ಊಳಿಗಮಾನ್ಯ ಪದ್ಧತಿಯ ಪಳೆಯುಳಿಕೆಗಳು ಇನ್ನೂ ಉಸಿರೆಳೆಯುತ್ತಿರುವ ಜೀವನ ವ್ಯವಸ್ಥೆಯಲ್ಲಿಯೇ 'ತೇರು' ಕೂಡ ಜನ್ಮ ತಾಳಿದೆ. 'ದೇಸಗತಿ' ಕಥೆಯಲ್ಲಿ ಬಂದ ಧರಮನಟ್ಟಿ ದೇಸಗತಿಯ ಕಥೆಯ ಒಂದು ರೀತಿಯ ಮುಂದುವರಿಕೆ ಈ ಕೃತಿಯಲ್ಲಿದೆ ಎನ್ನಬಹುದು. ವೆಂಕೋಬರಾವ್ (ರಂಗೋ ಪಟವರ್ಧನ್) ಕಟ್ಟಿದ ದೇಸಗತಿಯ ಅವನತಿಯ ದಿನಗಳಲ್ಲಿ ನಿಂತು ಅದರ ವೈಭವದ ದಿನಗಳನ್ನು ನೆನೆಯುತ್ತ ಈ ಕೃತಿ ಇವತ್ತಿನ ಬಾಳನ್ನು ಅರಿಯಲೆತ್ನಿಸುತ್ತಿದೆ. ಅದಕ್ಕೆ ಪೂರ್ವದ ಚರಿತ್ರೆ ಮರೆತಿಲ್ಲ, ತಕ್ಷಣ ಮರೆಯುವ ಅಪೇಕ್ಷೆಯೂ ಇಲ್ಲ. ದೇಸಗತಿಯ ಕಥೆಯನ್ನು ಅಮರವಾಗಿಸುವ ಬಯಕೆಯ ಸ್ವಾಂವಜ್ಜ ಇದ್ದಾನೆ. ಹಾಗೆಯೇ ಆ ಪುರಾಣವನ್ನು ತಿರಸ್ಕರಿಸುವ ದ್ಯಾವಪ್ಪನೂ ಇದ್ದಾನೆ. ಆದರೆ ಅವನು ಆ ಸನ್ನಿವೇಶದಿಂದಲೇ ಆಚೆ ಹೋಗಿ ನಿಂತಿದ್ದಾನೆ. ಹೊಸ ಕಾಲದ ತಿಳಿವಳಿಕೆಗಳು ಅಷ್ಟಷ್ಟಾಗಿ, ಇಷ್ಟಿಷ್ಟಾಗಿ ದೇಸಗತಿಯನ್ನು ಪ್ರವೇಶಿಸಿವೆ. ದೇಸಾಯರ ಜಾಗ ಜನರಿಗೆ ಸೈಟುಗಳಾಗಿ ಸರಕಾರದಿಂದ ಮಂಜೂರಾಗಿದೆ. ಇಂಥ ಲಾಭಗಳನ್ನು ಪಡೆದುಕೊಂಡಾಗಲೂ ವಿಠ್ಠಲನ ದೇವಾಲಯ, ಚಲಿಸಲಾರದೆ ನಿಂತಿರುವ ರಥ ಮುಂತಾದವು ಜನರ ನೆನಪುಗಳನ್ನು ಕೆರಳಿಸುತ್ತವೆ. ಹೊಸಕಾಲಕ್ಕೆ ಅವನ್ನೆಲ್ಲ ಪ್ರಸ್ತುತವಾಗಿರಿಸುವ ಅಪೇಕ್ಷೆ ಅನೇಕರಿಗಿದೆ. ಸ್ವಾಂವಜ್ಜನಂಥ ಸರಳ ಅಭಿಮಾನ, ಭಕ್ತಿಯ ಹಿರಿಯನಂತೆಯೇ ಈ ವ್ಯವಸ್ಥೆಯಿಂದ ಲಾಭ ಪಡೆಯಬಹುದಾದ ಅನೇಕ ಹಳ್ಳಿಗರಿಗೂ ದೇಸಗತಿಯ ಸ್ಮೃತಿಗಳು ಬೇಕು. ಕಥೆಯ ನಿರೂಪಕನಂಥವರಿಗೆ ಇದು ಚರಿತ್ರೆಯ ಕುರಿತ ಆಸ್ಥೆಯಾದರೆ, ಗೊಂದಲಿಗರ ಹಾಡುಗಳಲ್ಲಿ ಇದು ಆರಾಧನಾ ಮನೋಭಾವದ ದೀರ್ಘ ಕಥೆಯಾಗಿ ಧಾರ್ಮಿಕ ಮಹತ್ವ ಪಡೆದುಕೊಂಡಿದೆ. ಒಂದು ಜನಾಂಗದ ಜೀವನದಲ್ಲಿ ಯಾವುದೂ ಮರೆಯಾಗುವುದಿಲ್ಲ ಅಥವಾ ಮರೆಯಾಗಲು ಸಾಕಷ್ಟು ಕಾಲ ಬೇಕಾಗುತ್ತದೆ. 'ದೇಸಗತಿ'ಯಲ್ಲಿ ಕಲ್ಪನಾಥ ದೇಸಾಯಿಯವರ ಮನಸಿನೊಳಗೆ ಚಲಿಸುವ ಚಿತ್ರಗಳಂತೆ ಬಂದ ಕಥೆಗೆ ಇಲ್ಲಿ ಹಲವು ಜನರ ನಿರೂಪಣೆಯ ವೈವಿಧ್ಯಮಯ ಸ್ವರೂಪ ಒದಗಿದೆ. ಗೊಂದಲಿಗರ ಹಾಡುಗಳು, ಹಿರಿಯ ದ್ಯಾವಪ್ಪನ ಭಾವೋನ್ಮತ್ತ ಹುಡುಕಾಟಗಳು, ಕಿರಿಯ ದ್ಯಾವಪ್ಪನ ಕ್ರಾಂತಿಕಾರಕ ವಿಚಾರಗಳು, ಸ್ವಾಂವಜ್ಜನ ಗ್ರಹಿಕೆಯ ಕ್ರಮ ಹೀಗೆ ಧರಮನಟ್ಟಿಯ

ಕಥೆ ಹೇಳುವಲ್ಲಿ ಒಂದು ಇಡೀ ಸಮುದಾಯದ ಆಶೋತ್ತರಗಳು ಮೇಳೈಸಿವೆ.

ಗೋಕಾವಿ ಬಸ್ ಸ್ಟ್ಯಾಂಡಿನಲ್ಲಿ ನಿರೂಪಕನಿಗೆ ಸ್ವಾಂವಪ್ಪ(ಜ್ಜ) ಬಂದು ಮಾತನಾಡಿಸುತ್ತಾನೆ. ಇದು ನಿರೂಪಕನಿಗೆ ಹೊಸ ಅನುಭವವೇನೂ ಅಲ್ಲ. "ಯಾಕಂತಂದರ.. ಹಿಂಗ.. ಬಸ್ ಸ್ಟ್ಯಾಂಡಿನ್ಯಾಗ ಭೆಟ್ಟಿಯಾಗಿದ್ದ ಒಬ್ಬ ಮನಶಾ (ಭೂತ!?) ನನ್ನನ್ನ ಒಂದು ವಿಶೇಷ ಅನುಭವಕ್ಕೆ ಒಡ್ಡಿದ್ದ...... ಆ ದೆವ್ವಿನ ಅನುಭವನ ಕಥಿಯು ಹುಚ್ಚಿನ ಕರಿಟೊಪಗಿಯ ರಾಯ ಅನ್ನುವ ಕಥೀ! ಇನೊಬ್ಬ ಮನಶಾ...... ದೇಸಗತಿಯ ಕಥೀ ಹೇಳಿದ್ದ" ಆದರೆ ಸ್ವಾಂವಪ್ಪ ಅಪರಿಚಿತನಲ್ಲ, ನಿರೂಪಕ ಗುರುತು ಮರೆತಿದ್ದಾನಷ್ಟೆ. ಈತ ಧರಮನಟ್ಟಿಯವನು, ನಿರೂಪಕನಿಗೆ ಅಲ್ಲಿಯ ದೇಸಗತಿಯ ಕಥೆ ಹೇಳಿದವನು.

'ಹೂಂ, ನಿಮ್ಮ ಹರತಾಟದೊಳಗೆ ನಿಮ್ಮ ಊರಿನ ಕಥೀ ನೆನಪ ಇಟಗೋ ಅಂದರ ಅಥೆಂಗ ಆದೀತು ಬಿಡ್ರಿ...ಅಗದೀ ಕಳಬಳ್ಳೀ ಸಂಬಂಧಗೋಳ ಮರತ ಹೋಗೂ ಹಂತಾ ಭರಾಟೀ ಕಾಲ ಇದಾ.. ಹಂತಾದ್ದರಾಗ ನಮ್ಮ ಧರಮನಟ್ಟೀ ದೇಸಗತೀ ಕಥೀ ನೆಪ್ಪ ಇಟಗೋಪಾ ಅಂದರ ಎಲ್ಲೀ ಮಾತು! ಹಾಂ.. ಹಂಗ ಕೇಳಿದರ ನಾನ ಹುಚಪ್ಯಾಲಿ.. ಆ ದೇಸಗತೀ ಸುದ್ದಿ ಕಥೀ ಮಾಡಿ ಹೇಳಿ ನಿಮ್ಮ ಮನಸಿನ್ಯಾಗ ಉಳಸಾಕ ನೋಡಾಕತ್ತದನು..ಅದರ ಆ ದೇಸಗತಿಯ ಆಗದೀ ಖಾಸ ವಾರಸುದಾರ ಮಾಣೀಕ್ ದೇಸಾಯನ ವಿಲಾಯಿತೀ ಹೆಣ್ಣ ಕಟಿಗೊಂಡು ಅದೆಲ್ಲಿಗೋ ಆಮುರಿಕಾ ಅಂತ..ಆ ಆಮುರಿಕಾಕ್ಕೆ ಹಾರಿ ಹ್ವಾದನಂತ..ತನ್ನ ಕಳ್ಳಿನ ಕುಡೀ– ಆ ಎಳೇ ಕಂದ ಅಮೃತನ್ನ ಸದೇಕ ಬಿಟ್ಟು ಇಮಾನದಾಗ ಕುಂತು ಹ್ವಾದನಂತ.. ಈ ಅಮೃತನ–ಮುಂದ ಮತ್ತ ನಮ್ಮ ದೇಸಗತಿನ್ನ ಕಟ್ಟಿ ನಿಂದರಸಾಂವ–ಪುನರುಜ್ಜೀವನ ಮಾಡಾಂವ.. ಅಂತ ಹಲಬತಿದ್ದ ಅಮೃತನ ಮುತ್ತಜ್ಜ ಕಲ್ಪನಾಥ ದೇಸಾಯರನ್ನ ಮತ್ತ ತನ್ನ ಎಳೇ ಕೂಸನ್ನ–ಇಬ್ಬರನ್ನೂ ನೋಡಿಕೊಳ್ಳಲಿಕ್ಕೆಂತ–ಒಬ್ಬರಲ್ಲ ಇಬ್ಬರು ಆಯಾಗೋಳನ ನೇಮಿಸಿ, ಅವರಿಗೆ ಉಡಿ ತುಂಬ ರೊಕ್ಕಾ ಕೊಟ್ಟು, ದೇಸಾ ಬಿಟ್ಟುಹ್ವಾದನಂತ..! ಅಲ್ಲರೀ..ರೊಕ್ಕ ಸಿಕ್ಕಮ್ಯಾಲ ಯಾರ ದರಕಾರ ಯಾರಿಗೆ ಇರತೈತಿ ಹೇಳ್ರಿ..ಮಜಾ ನೋಡ್ರಿ.. ಆ ಕೂಸಿನ್ನ ನೋಡಿಕೊಳ್ಳಾಕ ನೇಮಣೂಕೀ ಮಾಡಿದ ಆಯಾನ ಹೆಸರು ಅನಸೂಯಾ ಅಂತ! ತ್ರಿಮೂರ್ತಿಗೋಳನ ಕೂಸಗೋಳನ ಮಾಡಿ ನಮ್ಮ ಆದಿನಾಥನಂಗ ಪೂರಾ ಬತ್ತಲೇ ಆಗಿ ಮಲೀ ಕುಡಿಸಿದ ಮಾತಾಯಿಯ ಹೆಸರೂ ಅನಸೂಯಾನ ಅಂತ!..ಇಲ್ಲಿ ಇಕಿ ಈ ಅನಸೂಯಾ ಏನ ನೋಡಿಕೊಂಡಳು..? ಹಾಲು ಕುಡಿಯುವ ಕಂದಮ್ಮನ ತುಟಿಗೋಳಿಗೆ ಮತ್ತ ಇಡೀ ಮೈಯಂತ ಮೈಗೆ ಕಟ್ಟಿರವಿ ಮುಕರಿ..

ಕಡದು ಕಡದು ..ಚಿಟ್ ಚಿಟ್ಟಂತ ಚೀರಿ.. ಆ ಎಳೀ ಕಳಿಗಿ ಪ್ರಾಣಾ ಬಿಟ್ಟಿತ್ತು. ಇನ್ನ ತೊಟ್ಟಿಲದಾಗ ಹೆಣಾ ಆಗಿ ಮಲಗಿದ ಮರಿಮಗನ್ನ ನೋಡಿದ ಕಲ್ಪನಾಥ ದೇಸಾಯರ ಹರಣನೂ ಹಾರಿ ಹೋಗಿತ್ತು.. ನಮ್ಮ ಧರಮನಟ್ಟಿಯ ದೇಸಗತಿಯ ಹೆಸರ ಹೇಳಿಕೊಳ್ಳಾಕ ಯಾರಂಬುವ ಯಾರೂ ನಮ್ಮ ನಾಡಿನ್ಯಾಗ ಉಳೀಲಿಲ್ಲ ನೋಡರಿ!.. ಇನ್ನ ಆ ಕಾರಭಾರೀ ತ್ರಿಂಬಕ ಭಟ್ಟನ ಸಂತಾನ ಅಂತೂ ಎಂದೋ ಊರು ಬಿಟ್ಟು.. ಪುಣೇ–ಮುಂಬಯಿ–ಬರೋಡಾ ಅಂತ ದೇಸಾಂತರಕ್ಕ ಹೋಗಿ ಧರಮನಟ್ಟಿಯ ಸಂಪರ್ಕಕ್ಕ ಹೊರತಾಗಿ ಬಿಟ್ಟಾವು..ದೇಸಗತಿಗೆ ಸಂಬಂಧ ಇದ್ದವರ ಹಿಂಗ ಅದರ ಹಂಗು ಹರಕೊಂಡು ಹೋಗಿರಬೇಕಾದರ..ಅದನ್ನ ಮನಸಿನ್ಯಾಗ ಇಟಗೊಂಡು ಕಥೀ ಮಾಡಿ ಹೇಳುವ ನಾನೂ..? ನಾ ಹುಚಪ್ಯಾಲಿ ಹೌದಲ್ಲರಿ..?"

ಸ್ವಾಂವಪ್ಪನಿಗೆ ಧರಮನಟ್ಟಿಯ ದೇಸಗತಿ ಕಥೆಯಾಗಿಯಾದರೂ ಉಳಿಯಬೇಕು ಎಂಬ ಹಂಬಲವಿದೆ. ತನ್ನೀ ಹುಚ್ಚಿಗೆ ಯಾವ ಅರ್ಥವಿದೆ ಎಂದೂ ಆತ ಯೋಚಿಸುತ್ತಿದ್ದಾನೆ. ದೇಸಾಯಿ ಮಾಣಿಕನೇ ದೇಶ ಬಿಟ್ಟು ಹೋಗಿದ್ದಾನೆ. ಕಾರಭಾರಿ ತ್ರಯಂಬಕ ಭಟ್ಟರ ಸಂತಾನದವರೂ ಯಾರೂ ಇಲ್ಲಿ ಉಳಿದಿಲ್ಲ. ದೇಸಗತಿಗೆ ಸಂಬಂಧ ಇರುವವರೇ ಅದರ ಹಂಗು ಹರಕೊಂಡು ಹೋಗಿರಬೇಕಾದರ' ಇದನ್ನೆಲ್ಲ ಕಥೆ ಮಾಡಿ ಹೇಳುವ ತಾನು ಹುಚಪ್ಯಾಲಿ ಎಂದು ಅಜ್ಜನ ತೀರ್ಮಾನ. ಆದರೆ ನಿರೂಪಕ ಈ ಹಿಂದೆ ಸ್ವಾಂವಜ್ಜ ಹೇಳಿದ ಕಥೆಗಳನ್ನು ಪೇಪರಿನ್ಯಾಗ ಛಾಪಿಸಿದ್ದಾನೆ ಎಂದು ತಿಳಿದಾಗ ತಾನು ಮಾಡಿದ್ದು 'ಸಾರ್ಥಕ ಆದಂಗ ಆತು' ಎಂಬ ಉದ್ಗಾರ ಅವನಿಂದ ಬಂದಿದೆ. 'ಹಾಗಿದ್ದರೆ ನಾ ನಿಮಗೆ ಊರಿನ ವಿಠ್ಠಲದೇವರ ಗುಡೀ ತೇರಿನ ಮಜಕೂರು ಹೇಳುತ್ತೇನೆ" ಎಂದು ಸ್ವಾಂವಜ್ಜ ಹೊಸ ಕಥೆ ಆರಂಭಿಸಿಯೇ ಬಿಟ್ಟ. ಅವನಿಗೆ ಕಥೆಗಳು ಗೊತ್ತು, ವ್ಯಾಖ್ಯಾನಗಳು ನಮ್ಮವು. ಅವನ ಬಣ್ಣನೆಯಲ್ಲಿ ಆ ದೇವಾಲಯ, ತೇರುಗಳ ಕುರಿತು ಅವನು ಇಟ್ಟಿರುವ ಶ್ರದ್ಧೆ, ಭಕ್ತಿ ವ್ಯಕ್ತವಾಗುತ್ತದೆ.

"......ದೇಸಗತಿಯನ್ನು ಕಟ್ಟಿದ ರಂಗೋ ಪಟವರ್ಧನ ದೇಸಾಯರು ಧರಮನಟ್ಟಿಯೊಳಗ ತಮ್ಮ ಮನಿದೇವರು ವಿಟ್ಠಲಂದು ಒಂದು ಗುಡೀ ಕಟ್ಟಿಸಿದರರೀ.. ದೇಸಗತಿ ಹಾಳಾದರೂ ಈ ಗುಡಿಯ ಒಂದ ಮೂಲಿ ಸೈತ ಮುಕ್ಕಾಗದಂಗ ನಿಂತೈತಿ ನೋಡ್ರಿ......ಸಣ್ಣಾಗಿ ಕಟದ ಬಿಳೀ ಕಲ್ಲಿನ ಕಟ್ಟಡ...... ಗ್ವಾಡಿ ಮತ್ತ ಶಿಖರದ ಮ್ಯಾಲೆಲ್ಲಾ ಸುಳವಗೋಳೂ ಮತ್ತ ಚಿತ್ತಾರಗೋಳು......ಒಂದೊಂದು ಕಂಬನೂ ಹೂವಿನ ಬಳ್ಳಿ ಇದ್ದಂಗ

ನೋಡ್ರಿ! ಗರ್ಭಗುಡ್ಯಾಗಿನ ವಿಟ್ಠಲ ರುಕುಮಾಯಿ ಅಂತೂ ಥೇಟ್ ಅವರ!...... ಅಗದೀ ಎದ್ದ ಬರೂಹಂಗ ಕಾಣತಾರು! ದೇಸಗತಿ ಕಟ್ಟಾಕ ಬಲಾಕೊಟ್ಟ ಬಲವಂತ ದೈವ ಅದಾ..... ಜಾಗ್ರುತಕ್ಷೇತ್ರ......ಜಗತ್ ಪ್ರಸಿದ್ಧ ಆಗೇತಿ. ನಮ್ಮ ಊರಾಗ ನಮ್ಮದೊಂದ ಜಯ್ಯಾರ ಮನಿತನಾರೀ......ಜಯ್ಯಾರ ಆದರೂ ನಾವು ವಿಟ್ಠಲ ದೇವರಿಗೆ ನಡೆಕೋತೀವರಿ......ಯಾವ್ಯಾವ ನಾಡಿನ್ಯಾಗ ಯಾವ್ಯಾವ ದೇವರು ಇರತಾವೋ ಅದನ್ನ ನಾವು ನಂಬಬೇಕಲ್ಲರೀ......?"

ಒಂದು ರಾಜ್ಯವ್ಯವಸ್ಥೆ ತನ್ನ ಪ್ರಜೆಗಳ ಸರಳ ನಂಬಿಕೆಯನ್ನು ದೃಢಪಡಿಸಲು ಮಾಡಿಕೊಳ್ಳುವ ಉಪಾಯಗಳಲ್ಲಿ ಇಂಥ ದೇವಾಲಯ, ತೇರು, ಉತ್ಸವಗಳದೂ ಮಹತ್ವದ ಪಾಲಿದೆ. ಹುಟ್ಟಿನಿಂದ ಜೈನನಾದರೂ ಸ್ವಾಂವಪ್ಪ ತನ್ನ ನಾಡಿನ ದೈವಕ್ಕೆ ಶರಣೆಂದವನು. ಈ ದೇವಾಲಯದ ತೇರಿನ ಸೋಜಿಗವನ್ನೂ ಅವನು ತನ್ನ ಮಾತುಗಳಿಂದಲೇ ಕಣ್ಣೆದುರು ಮೂಡಿಸಬಲ್ಲವನು.

"......ಅದನೂ ದೇಸಾಯರ ಕಟ್ಟಿಸಿದ್ದು.. ಏನಿಲ್ಲಂದರೂ ಒಂದ ಗೇಣು ದೀಡ ಗೇಣು ದಪ್ಪನಾದ – ಎರಡು ಮಾರು ಎತ್ತರವಿದ್ದ ಕಲ್ಲಿನ ಗಾಲಿಗಳು.. ಧರಮನಟ್ಟಿಯ ದೇಶ ಅಂದರ ಹಿರಿಹೊಳಿಯ ದಂಡಿಯ ಎರಿ ಮಣ್ಣಿನ ಬಯಲೋ ಬಯಲು ನಾಡರಿ.. ಇಲ್ಲಿ ಒಂದು ಸಣ್ಣ ಕಲ್ಲು ಸಿಗುವುದೂ ದುರ್ಲಭ! ಹಂತಾದ್ದರಾಗ ಈ ಕಲ್ಲು ಫಳಿಗಳನ್ನ ಎಲ್ಲಿಂದ ತಂದಿದ್ದಾರಪಾ ಅಂತ ಸೋಜಿಗ ಆಗತೈತಿ......ಆ ಗಾಲಿಗಳ ಮ್ಯಾಲ ಮರಾಗಿಡಾ ಬಳ್ಳಿಗೋಳ ಸುಳವುಗಳು......ಗಾಲಿಗಳ ನಟ್ಟನಡಕ ಎರಡ ಮಳದಗಲದ ಗುಂಭ......ಗುಂಭದ ನಡೂಮಧ್ಯ ಮಳದಗಲದ ಆರುಪಾರು ರಂಧ್ರ......ಆ ರಂಧ್ರದೊಳಗಿಂದ ಹಾದುಬಂದು– ಮಳವುದ್ದ ಹೊರಗೆ ಚಾಚಿದ ಮರದ ಕೆಚ್ಚಿನ ಅಚ್ಚು ಮತ್ತ ಆ ಅಚ್ಚಿಗೆ ಸೂಸಿದ ರಟ್ಟೆ ಗಾತ್ರದ ಕಬ್ಬಿಣದ ಕೀಲುಗಳು......

ಆ ತೇರು ಕಟ್ಟಿದ ವಿಶ್ವಕರ್ಮ ಈ ಅಚ್ಚಿನ ಮ್ಯಾಲೂ ಸುಳವು ಕೆತ್ಯಾನೆ.. ನದೀ.. ಕಾಳಿಂದೀ ಮಡು.. ಮುಗಲು – ಸೂರ್ಯಾ.. ಚಂದ್ರಾಮ.. ಮತ್ತ ಚಿಕ್ಕಿಗೋಳು! ಆ ಎರಡು ಅಚ್ಚುಗಳ ಮ್ಯಾಲೆ ಕುಂತ ಮಾರು ದೀಡ ಮಾರಿನಷ್ಟು ಎತ್ತರವಾದ, ದಪ್ಪನೆಯ ಕೆಚ್ಚಿನಿಂದ ಮಾಡಿದ ಮರದ ಚೌಕಟ್ಟು.. ಆ ಚೌಕಟ್ಟಿನ ತೋಳುಗಳ ಮ್ಯಾಲೂ ಚಿಕ್ಕಿ ಚಂದ್ರಾಮರ ರಾಜ್ಯ! ಗಾಲಿಗಳಿಗಿಂತ ಒಂದು ಮಳದಷ್ಟು ಮ್ಯಾಲೆ ಎತ್ತರಕ್ಕೆ.. ಎತ್ತರವಾದ ಈ ಚೌಕಟ್ಟಿನ ಮ್ಯಾಲೆ

ಕುಂತಿದೆ ಆರು ಮಜಲಿನ ಅಷ್ಟಕೋನದಾಕಾರದ ತೇರು......."

ಸ್ವಾಂವಪ್ಪ ತನ್ನ ಊರಿನ ದೇವಾಲಯ, ತೇರುಗಳ ಅತ್ಯಂತ ಸೂಕ್ಷ್ಮ ಪರಿಚಯ ಉಳ್ಳವನು ಆ ಕುರಿತು ಆದರ ಉಳ್ಳವನು ಎಂಬುದು ಮೇಲಿನ ಭಾಗಗಳಿಂದ ಸ್ಪಷ್ಟ. ಇಂಥದೊಂದು ದೇಸಗತಿ ಆಡಳಿತವನ್ನು ಅವನು ಒಪ್ಪಿಕೊಂಡವನು. ಈ ಪರಂಪರೆಯಲ್ಲಿ ಅವನಿಗೆ ಗಾಢನಂಬಿಕೆ ಇರುವುದರಿಂದಲೇ ನಿರೂಪಕನೆದುರು ಇಷ್ಟೊಂದು ಮಾತುಗಳಿಂದ ಅದನ್ನು ಮತ್ತೆ  ಸೃಷ್ಟಿಸುತ್ತಿದ್ದಾನೆ. ರಾಮನವಮಿಯ ದಿವಸ ತೇರು ಎಳೆಯುವ ಮೊದಲು "ಒಬ್ಬ ಪರವಂತ ತೇರಿನ ಗಾಲಿಗೆ ತನ್ನ ತೆಲೀ ಹೊಡಕೊಂಡು ರಗತಾ ತಗದು ಮೂಡಣ ದಿಕ್ಕಿನ ಮಕಕ್ಕ ಹಚ್ಚತಾನರೀ" ಎಂದಾಗ ನಿರೂಪಕನಿಗೆ ಕುತೂಹಲವುಂಟಾಗುತ್ತದೆ. ಸ್ವಾಂವಜ್ಜ ಒತ್ತಾಯಿಸಿ ತನ್ನೂರಿಗೆ ನಿರೂಪಕನನ್ನು ಕರೆದುಕೊಂಡು ಹೋಗಿ ಹಳೆಯ ಹಾದಿಗಳಲ್ಲಿ ನಡೆಸತೊಡಗುತ್ತಾನೆ. ಅವು ಜಾತ್ರೆಯ ದಿನಗಳು. ಗೊಂದಲಿಗರು 'ರಗತ ತಿಲಕದ ಸೇವೆ'ಯನ್ನು ಹಾಡುಕಟ್ಟಿ ಕಥೀ ಮಾಡಿ ಹೇಳುವ ಪದ್ಧತಿಯನ್ನು ನಿರೂಪಕ ಸ್ವತಃ ನೋಡುವ ಅವಕಾಶ ದೊರೆಯುತ್ತದೆ. ಸುಮಾರು ಇಪ್ಪತ್ತೇಳು ಮುದ್ರಿತ ಪುಟಗಳಷ್ಟು ದೀರ್ಘವಾದ ಕಥನ ಕವನವದು. ತೇರಿನ ವೈಭವವನ್ನು ವರ್ಣಿಸಿ ಆ ಕವನ 'ಇಂಥಾ ಮೂರು ಲೋಕದೊಳಗೂ ಮರಿಯುವಂಥಾ ಹೊನ್ನ ಕಳಸದ ತೇರು ಕಟ್ಟಿಸಿದ ಪಟವರ್ಧನ ದೊರೀ ಅಂತಾರೇ' ಎಂದು ಹಾಡುತ್ತದೆ. ಈ ಕಥೆಯ ಮುಖ್ಯ ಭಾಗವೇ ಆಗಿರುವ ಈ ಕಥನ ಕವನವನ್ನು ಒಂದಿಷ್ಟು ವಿವರವಾಗಿ ನೋಡಬಹುದು. ಆರು ಮಜಲುಗಳ ರಥದ ವೈಭವದ ವರ್ಣನೆ ಮೊದಲಿಗಿದೆ:

" ಆಹಾ......
ಒಂದಾನೆ ಮಜಲಾಗೆ ಏನೇನು ನೋಡು
ಹರ ನನ್ನ ಮಾದೇವ್ಯೆ
ಒಂದಾನೇ ಮಜಲಾಗೆ ಆದಿ ಶೇಷಾನೊ
ಶಿವಶಿವ ಮಾದೇವ್ಯೆ
ಆಹಾ.. ಒಂದಾನೇ ಮಜಲಿನ ಎಂಟೂ ದಿಕ್ಕೆಂಬುವ ಕಡೆ ಆದಿಶೇಷಾನೆಂಬೊ ಸರ್ಪವು
ಮ್ಯಾಗಿನ ಇಡೀ ಬ್ರಹ್ಮಾಂಡವನ್ನ ಹೊತಗೊಂಡು ನಿಂತದಾವೇ..
ಎರಡನೆ ಮಜಲಾಗ ಏನೇನು ನೋಡೋ
ಹರ ಹರ ಮಾದೇವ್ಯೆ

ಎರಡಾನೇ ಮಜಲಾಗೆ ಐರಾವತವಯ್ಯಾ

ಶಿವ ಶಿವ ಮಾದೇವ್ಶೈ

ಆಹಾ..ಎರಡಾನೇ ಮಜಲಿನಲ್ಲಿ ಎಂಟೆಂಬುವ ಎಂಟು ದಿಕ್ಕಿಗೆ ಮಕ ಮಾಡಿದ ಎಂಟು ಎಂಟು ಐರಾವತಗೋಳೂ ಸೊಂಡಲೆಂಬುವದನ್ನ ಮ್ಯಾಲಕೆತ್ತೀ......

ಹರ ಹರ ಮಾದೇವ್ಶೈ

ಸೊಂಡಲೆಂಬುವನ್ನ ಮ್ಯಾಲಕ ಎತ್ತಿ ಮ್ಯಾಗಿನ ನಾಲ್ಕು ಮಜಲುಗಳನ ಹೊತ್ತಿ ನಿಂತ ದಾವೆ

ಶಿವ ಶಿವ ಮಾದೇವ್ಶೈ

ಮೂರಾನೆ ಮಜಲಾಗೆ ಮತ್ತೇನು ನೋಡೋ

ಹರ ಹರ ಮಾದೇವ್ಶೈ

ಆಹಾ......

ಮೂರಾನೇ ಮಜಲಾಗೆ ಮತ್ಸ್ಯ–ಕೂರ್ಮ–ಇಲಿ ಹೆಗ್ಗಣ ಹಂದಿಗಳಾದಿಯಾಗಿ ನಾನಾ ನಮೂನೆಯ ಕಾಟಕ ಜೀವಿಗಳಂಬೋವೂ – ಕಾಟಕ ಮಿಕಗೋಳೂ

ಶಿವ ಶಿವ ಮಾದೇವ್ಶೈ

ಆ ನಾನಾ ನಮೂನಿಯ ಕಾಟುಕ ಜೀವಗಳೂ ಮಿಕಗಳೂ ಮ್ಯಾಗಿನ ಮೂರು ಮಜಲನ್ನ ಹೊತ್ತು ನಿಂತದಾವೇ..

ಹರ ನನ್ನ ಮಾದೇವ್ಶೈ

ಹಾಂ..

ನಾಕಾನೇ ಮಜಲಾಗೆ ನೆರದದ್ದು ಏನೊ

ಹರ ನನ್ನ ಮಾದೇವ್ಶೈ

ನಾಕಾನೇ ಮಜಲಾಗೆ ಎತ್ತು ಕುದುರಿಗಳೊ

ನಾಕಾನೆ ಮಜಲಾಗೇ ಹೈನದ ಆಕಳವ್ಶೈ

ನಾಕಾನೆ ಮಜಲಾಗೆ ಮತ್ತೇನು ನೋಡೋ

ನಾಕಾನೆ ಮಜಲಾಗೇ ಕುಂಟಿ ಕೂರಿಗಿಯ್ಶೈ

ನಾಕಾನೆ ಮಜಲಾಗೆ ನೊಗ ಗಾಲಿ ತಕ್ಕಡಿಯ್ಶೈ

ಶಿವ ನನ್ನ ಮಾದೇವ್ಯೆ!"

ಹೀಗೆ ತೇರಿನ ಆರನೇ ಮಜಲಿನವರೆಗೂ ಇರುವ ವಿವಿಧ ಕೆತ್ತನೆಗಳನ್ನು ಹಾಡು ಬಣ್ಣಿಸುತ್ತದೆ. ಪಟವರ್ಧನ ದೊರೆ ಕಟ್ಟಿಸಿದ ಈ ರಥ ಪೌರಾಣಿಕ ಪ್ರತಿಮೆಗಳನ್ನು ಹೊತ್ತು ಮುಗ್ಧ ಜನರಲ್ಲಿ ಭಕ್ತಿಯ ಉದ್ರೇಕ ಸೃಷ್ಟಿಸಿರುವುದು ಸಹಜವೇ ಆಗಿದೆ. ಗೊಂದಲಿಗರ ಹಾಡು ಮುಂದುವರಿಯುತ್ತದೆ:

"ಬಾರಪ್ಪ ಮಂತ್ರಿಯೇ ಬಾರಯ್ಯ ಬಾರೋ
ಹೊನ್ನ ಕಳಸದ ತೇರು ಎಳಿಯೂದು ಎಂದೊ
ಬಂಗಾರ ಕಳಸದ ತೇರು ಎಳಿಯೂದು ಎಂದೋ"

'ಕಾರಭಾರಿ ತ್ರಿಂಬಕ ಭಟ್ಟರು' ಮುಹೂರ್ತ ಹುಡುಕಲೆಂದು ' ಶಿವನೇ' ಅಂತ ಕಣ್ಣು ಮುಚ್ಚಿ ಕೈಯ ಮುಗಿಯುತ್ತಿದ್ದರೆ ಮತ್ತೆ ಮತ್ತೆ ಭರ್ರೆಂಬೋ ಗಾಳಿಗೆ ದೀಪ ಆರಿಹೋಗುತ್ತದೆ. ಶಾಸ್ತ್ರದ ಅಯ್ಯನವರನ್ನು ಕರೆಸಿದರೆ ಅವರು 'ಅಪಸಕುನವೆಂಬುದು ಆವರಿಸಿದ ಈ ತೇರನ್ನ ಎಳಿಯುವುದು ತರವಲ್ಲ ತಂದೇ' ಅನ್ನುತ್ತಾರೆ:

"ಶಾಸ್ತ್ರದ ಅಯ್ಯನವರು ಬಂದು ಹೊತಿಗೀ ತಗದು ಶಾಸ್ತ್ರ ನೋಡಿ ಕಾರಭಾರಿಗಳಿಗೆ ಹೇಳುತ್ತಾರೇ–

ಕಾರಭಾರೀ ದೊರೆಯೆ ನೀವು ನನ್ನ ಮನ್ನಸರಿ
ಈ ತೇರು ಎಳಿಯುವದುದು ತರವಲ್ಲ ತಂದೇ
ಎಡಕೆ ಅಪಸಕುನಾವು ಬಲಕೆ ಅಪಸಕುನಾ
ಹಿಂದೆ ಅಪಸಕುನಾವು ಮುಂದೆ ಅಪಸಕುನಾ
ಎಂಟು ಮೂಲಿಗಳಲ್ಲಿ ಎಂಟು ಅಪಸಕುನಾ
ಹಿಂಗೆ ಅಪಸಕುನವೆಂಬುದು ಅವರಿಸಿದ ಈ ತೇರನ್ನ ಎಳಿಯುವುದು ತರವಲ್ಲ ತಂದೇ"

ಅಂತ ನುಡಿದ ಶಾಸ್ತ್ರದ ಅಯ್ಯನವರನ್ನ ಕಾರಭಾರಿ ಎಂಬ ತ್ರಿಂಬಕ ಭಟ್ಟ ಬೈಯುತ್ತಾರೆ.

ತ್ರಿಂಬಕ ಭಟ್ಟರೇ ಒಂದು ಮುಹೂರ್ತ ನಿಗದಿಪಡಿಸುತ್ತಾರೆ. ಸಡಗರದ ಸಿದ್ಧತೆ

ನಡೆದು ತೇರೆಳೆಯುವ ದಿನ ಬರುತ್ತದೆ. "ಭೋರೆಂಬುವ ಸಾಗರದ ಹಂಗೆ ಇದ್ದ ಅಷ್ಟು ಮಂದಿ' ಕಸವು ಹಾಕಿ ಉಸರು ಬಿಗಿ ಹಿಡಿದು ಸ್ವಾಮಿಯ ಆ ರಥವನ್ನ ಎಳೆದರೆ ತೇರು ಜಪ್ಪಂತ ಅನ್ನಲಿಲ್ಲ, 'ಬಟ್ಟಿನಷ್ಟಾದರೂ' ಮುಂದಕ್ಕೆ ಸರಿಯಲಿಲ್ಲ. ಡಂಣಾಯಕ ಆರು ನೂರು ಕುದುರೆಗಳನ್ನು, ಆರುನೂರು ಎತ್ತುಗಳನ್ನು ಕಟ್ಟಿ ಎಳಿಸಿದರೂ ರಥ ಚಲಿಸಲಿಲ್ಲ. ಕಾರಭಾರಿಗಳು ಆಗ ದೇವಾಲಯದ ಪೂಜಾರಿಗೆ ಹೋಗಿ ಕೇಳುತ್ತಾರೆ:

"ಪೂಜಾರಿ ಅಂದರ ಬರೇ ಪೂಜಾದ ದಕ್ಷಿಣಾ ಎತ್ತೂದೂ ಭಕ್ತ ಮಂದಿ ತಂದುಕೊಟ್ಟ ಎಡೀ ಅಂಬುವದನ್ನ ತಿನ್ನೋದು ಅಷ್ಟೆ ಅಲ್ಲ......
ಆಹಾ......
ಪೂಜಾರಿ ಅಂದರ ದೇವರನ ಮಾತಾಡಸಬೇಕು..ದೇವರನ ಮಾತಾಡಿಸಿ ಅವನ ಮನಸಿನ್ಯಾಗ ಏನೈತೀ ಅಂತ–
ತೇರಂಬುವದು ಮುಂದಕ ನಡೀಬೇಕಾದರ ಏನು ಮಾಡಬೇಕಂತ ತಿಳ ದ ಹೇಳಬೇಕಪಾ ಪೂಜಾರೀ ಅಂತ ಅನ್ನುತ್ತಾರೆ
ಪೂಜಾರಿಗೆ ಬುಗಲು ಆತು......"

ಪೂಜಾರಿಯ ಅಳವಿನ ಕೆಲಸವಲ್ಲ ಅದು.ಕಡೆಯಲ್ಲಿ ಪುನಃ ಶಾಸ್ತ್ರದ ಅಯ್ಯನವರೇ ಪರಿಹಾರ ಹುಡುಕಬೇಕಾಗಿ ಬರುತ್ತದೆ. ' ಹತ್ತ ನಮೂನಿಯ ಲೆಕ್ಕಾ ಹಾಕಿ ಅಳದೂ ಸುರದೂ' ಶಾಸ್ತ್ರದ ಅಯ್ಯನವರು ತೇರು ನರಮನುಷ್ಯನ ಬಲಿ ಬೇಡುತ್ತಿದೆ ಎನ್ನುತ್ತಾರೆ.

"ಶಾಸ್ತ್ರನುಡಿಯುವದನ್ನ ನುಡದೇನು ದೊರಿಯೆ
ನರಮನುಸ ನಾನು ನನಗೇನು ತಿಳಿಯಾದು
ಹರ ನನ್ನ ಮಾದೇವ್ಯೆ!
ಆಹಾ.....
ನಾನಾದರೂ ಪಾಮರನು..ನಾನೆಂಬ ನಾನು ಏನೂ ಅರಿಯದ ಮೂಢನು...
ದೊರಿಯೇ ಶಾಸ್ತ್ರಏನು ಹೇಳುತದೆಯೋ ಅದನಷ್ಟೇ ನಿಮಗೆ ಹೇಳೇನು ಅಂತಂದು ಆ ಶಾಸ್ತ್ರದ ಅಯ್ಯನಾದರೂ ಹಿಂಗ ನುಡದಾನೆ–
"ಹಿಂಡಿ ಹಾಕದ ಆಕಾಳು ಹಿಂಡೀತು ಹೆಂಗೊ
ಕಾಳು ಹಾಕದೆ ಕುದರಿ ಓಡೀತು ಹೆಂಗೊ

ನರಮನುಸ ಕಟ್ಟಿಸಿದ ತೇರು ನಿನ್ನಾದೂ
ನನಗೇನು ಕೊಟ್ಟೀಯೊ ಮುಂದೆ ನಡಸಾಕೆ
ನರಮನಸನ್ಹೊರತು ನನಗೆ ಮತ್ತೇನು ಬ್ಯಾಡೊ"

'ನಾವೇ ಇಲ್ಲದಿರಕ ದೇಸಗತಿಯ ಗತಿ ಹೆಂಗ?' ಅಂತ ದೇಸಾಯಿ ಕಾರಭಾರಿ, ಡಂಣಾಯಕ ಮುಂತಾಗಿ ಎಲ್ಲರೂ ಬಲಿಯಾಗಲು ಒಲ್ಲೆನೆನ್ನುತ್ತಾರೆ. ಮತ್ತೆ ಶಾಸ್ತ್ರವನ್ನು ಅಳೆದೂ, ಸುರಿದೂ ಕಾಟುಕ ಜಾತಿಯ ಮನುಷ್ಯನನ್ನು ಬಲಿ ಕೊಡುವುದೆಂದು ನಿರ್ಧಾರವಾಗುತ್ತದೆ. ಅದರಂತೆ ಗೊಂಬೀರಾಮರ ದ್ಯಾವಯ್ಯ (ದ್ಯಾವಪ್ಪ) ತನ್ನ ಮಗನನ್ನು ಬಲಿ ಕೊಡುವ ನಾಟಕೀಯ ಬೆಳವಣಿಗೆ ಆಗುತ್ತದೆ. ಬಸುರಿಯಾಗಿರುವ ಹೇಂತಿ ಮತ್ತ ಒಂಭತ್ತು ಮಕ್ಕಳನ್ನು ಕಟಿಗೊಂಡು ಹಸಿವಿನಿಂದ ದಿಕ್ಕೆಟ್ಟಿರುವ ದ್ಯಾವಪ್ಪನಿಗೆ ಬೇರೆ ಹಾದಿ ಇಲ್ಲದಂತಾಗಿದೆ. ಈ ಬಲಿದಾನಕ್ಕೆ ಪ್ರತಿಯಾಗಿ ಅವನಿಗೆ ಎಂಟೆಕೆರೆ ಹೊಲ ಸಿಗಲಿದೆ. "ನಮಗೇನು ಮಕ್ಕಳ ಕೊರತಿಯಿಲ್ಲ, ಸ್ವಾಮಿಯೇ ಕೊಟ್ಟ ಮಕ್ಕಳು, ಒಬ್ಬನನ್ನ ಈ ಸ್ವಾಮಿಗೆ ಕೊಟ್ಟರೆ ಉಳಿದ ಮಕ್ಕಳೆಲ್ಲಾ ಸುಕದಿಂದ ಇರತಾವೆ" ಎಂಬುದು ದ್ಯಾವಪ್ಪನ ತರ್ಕ. "ಪರುವತದಂಥಾ ಆ ತೇರೀನ ಎಡದ ಗಾಲೀಗೆ ಆ ಎಳೀಯ ಕಂದಾನ ಅಡ್ಡವಾಗಿ ಮನಗಿಸಿ" ಎಳೆದದ್ದೇ ಆ ತೇರು
'ಇಳಕಲಿನ್ಯಾಗ ಉಳ್ಳುವ ಗೋಲಿಯ ಗುಂಡದ ಹಂಗ' ಸುರಳೀತವಾಗಿ ಚಲಿಸಿತು.

"ಆ ಕಾಟುಗಾರ ಕುಲದ ಕಂದಮ್ಮನ್ನ ತಿಂದು
ಮುಂದಾಕೆ ನಡೆದ ತೇರು
ಸೂರ್ಯೇ ಚಂದ್ರಾಮ ಇರುವ ತನಕಾ..

ಆಹಾ......

ಆಕಾಸದಾಗೆ ಚಿಕ್ಕಿಗೋಳು ಇರೂ ಮಟಾ
ಆ ರಥವೆಂಬುವುದು ಮುಂದಕ ನಡಿಯೂದಕೆ
ಕಾಟುಗರ ರಗುತವನ್ನ ಬಯಸುತಾದಲ್ಲೊ ಶಿವನೇ
ಶಿವಶಿವ ಮಾದೇವ್ಹೈ!"

ಅದರಂತೆ ಪ್ರತಿ ವರ್ಷ ಧರಮನಟ್ಟಿಯ ವಿಠ್ಠಲ ಸ್ವಾಮಿಯ ತೇರಿಗೆ ಗೊಂಬೀರಾಯರ ವಂಶದವರು ಬಂದು ತಲೆ ಜಜ್ಜಿಕೊಂಡು ಹಣೆಯಿಂದ ಬಸಿಯುವ ಬಿಸಿರಗುತದಿಂದ ತೇರಿನ ಮೂಡಣ ದಿಕ್ಕಿನ ಮುಖಕ್ಕೆ ರಗುತ ತಿಲಕ ಇಡಬೇಕೆಂದು ವಿಧಿಸಲಾಯಿತು. ಮಾತಿನಂತೆ ದ್ಯಾವಪ್ಪನಿಗೆ ಕಳ್ಳೀಗುದ್ದಿ ಎಂಬ ಊರಿನ ಎಂಟೆಕೆರೆ ಮಡ್ಡಿ ಭೂಮಿ ದೊರೆಯಿತು. ಇದು ಗೊಂದಲಿಗರ ಹಾಡು ಹೇಳುವ ಚರಿತ್ರೆ. ದೇಸಗತಿಯ ಚರಿತ್ರೆಯ ರಥ ಸರಿಸಲು ಕಾಟುಗರು ನಿರಂತರವಾಗಿ ರಕ್ತತರ್ಪಣ ನೀಡುತ್ತಾ ಬರುವ ವಿದ್ರಾವಕ ಸತ್ಯವನ್ನು ವೈಭವೀಕರಿಸಿ ಅದನ್ನು ಆತ್ಮಾರ್ಪಣೆಯ ಉತ್ಪ್ರೇಕ್ಷೆಯಿಂದ ಈ ಕಥೆ ಆರಾಧಿಸುತ್ತದೆ. ನಿರೂಪಕ ಕಳ್ಳೀ ಗುದ್ದಿಗೆ ಹೋಗಿ ಗೊಂಬೀರಾಯರ ಮನೆಯಲ್ಲಿರುವ ಸನದನ್ನು ನೋಡಿ ಬರುತ್ತಾನೆ. ಅದು ಆಚಂದ್ರಾರ್ಕವಾಗಿ ಭೂಮಿಯ ಮೇಲೆ ಧರಮನಟ್ಟಿ ದೇಸಗತಿ ಇರುವುದೆಂದೂ, ಗೊಂಬೀರಾಮರ ಮನೆತನದವರು ವರ್ಷವೂ ರಕ್ತ ತಿಲಕದ ಸೇವೆ ಮಾಡಿಕೊಂಡು ಬರಬೇಕೆಂದೂ ವಿಧಿಸಿದ ಆಜ್ಞಾಪತ್ರ:

"..ಈ ಜಗತ್ತಿನ್ಯಾಗ ಸೂರ್ಯಾ ಚಂದ್ರಾಮರು ಇರುವ ತನಕಾ ಮುಗಿಲಿನ್ಯಾಗ ನಕ್ಷತ್ರಗೋಳು ಇರೋತನಕಾ ಭೂಮಿಯ ಮ್ಯಾಲೆ ಧರಮನಟ್ಟಿಯ ದೇಸಗತೀ ಇರತದೆ..
ಧರಮನಟ್ಟಿಯ ದೇಸಾಯರ ನೆಳ್ಳಿನ್ಯಾಗ ವಿಟ್ಠಲ ಸ್ವಾಮಿಯ ತೇರು ನಿರಂತರ ಎಳೀತದೆ..
ಸ್ವಾಮಿಯ ಈ ರಥಕ್ಕೆ ಪ್ರಪಂಚದೊಳಗೆ ಗೊಂಬೀರಾಮರ ದ್ಯಾವಪ್ಪನ ವಂಶಸ್ತರು ಎಲ್ಲೇ ಇರಲಿ ಅವ್ರು ಧರಮನಟ್ಟಿಯ ವಿಟ್ಠಲ ಸ್ವಾಮಿಯ ತೇರಿಗೆ ಬಂದು ಒದಗಬೇಕು..
ಗೊಂಬೀರಾಮರ ದ್ಯಾವಪ್ಪನ ವಂಶಸ್ತರು ಧರಮನಟ್ಟಿಯಲ್ಲಿ ಚೈತ್ರ ಶುಕ್ಲ ನವಮೀ ಮೂರ್ತದಾಗೆ ಎಳೆಯುವಂಥಾ ವಿಠ್ಠಲ ಸ್ವಾಮಿಯ ತೇರಿಗೆ ಬಂದು–
ಆ ತೇರಿನ ಗಾಲಿಗೆ ತಮ್ಮ ತೆಲಿಯನ್ನ ಹೊಡದು–
ನೊಸಲಿನಿಂದ ಬಸಿಯುವಂಥಾ ಹಸೀ ರಕ್ತವನ್ನ ಬಲಗೈ ಹೆಬ್ಬಟ್ಟಿನ ಮ್ಯಾಲೆ ಧರಿಸಿ ಅದರಲೇ ಸ್ವಾಮಿಯ ರಥದ ಮೂಡಣ ದಿಕ್ಕಿನ ಮುಖಕ್ಕೆ ತಿಲಕವನ್ನು ಇಡಬೇಕು. ಈ ರಗತ ತಿಲಕದ ಸೇವಾ ಅನ್ನುದು ಜಗತ್ತು ಅನ್ನುದು ಪ್ರಳೆ ಆಗಿ ನಾಶ ಆಗೂತನಕಾ–ಸೂರ್ಯಾ ಚಂದ್ರಾಮ ಚಿಕ್ಕಿ ಇರೂತನಕಾ ಅನೂಚಾನವಾಗಿ ನಡಿಯತಕ್ಕದ್ದೆಂದು ರವಿಕುಲ ಸಂಭೂತ ಪೇಶವೇ ಸಾಮ್ರಾಜ್ಯ ಬಂಧು ರಾಜಮಾನ ರಾಜಶ್ರಿ ರಂಗೋ ಪಟವರ್ಧನ ದೇಸಾಯರು ಬರಸಿದ ಅಜ್ಞಾ ಪತ್ರ ಎಂಬುವ ಈ ಸನದನ್ನ ಲಿಪಿಕಾರ ಶಾಸ್ತ್ರದ ಹಂಪಯ್ಯನವರು ಬರದಾರೆ ಮತ್ತು ದೇಸಾಯರ ಕಾರಭಾರಿ ಅದಂಥ ತ್ರ್ಯಂಬಕ ಭಟ್ಟರು ಇದಕ್ಕೆ ಒಪ್ಪವ ಹಾಕಿದಾರೆ."

ಕಳ್ಳೀಗುದ್ದಿಗೆ ಬಂದು ನೆಲೆಸಿದ ದ್ಯಾವಪ್ಪನಿಗೆ ತಾನು ಕೊಟ್ಟ ಬಲಿದಾನದಿಂದ ಸಿಗುತ್ತಿರುವ ಮಾನ, ಮರ್ಯಾದೆಗಳು ಬೇರೆಯದೇ ಸೂಚನೆ ನೀಡಿದವು. ಅನವರತ ವಿಠ್ಠಲನ ಜಪ ಸುರುವಾಯಿತು. ಒಮ್ಮೆ ಗೂಗೀಕೊಳ್ಳದಲ್ಲಿ ಲಂಗಟದ ಸ್ವಾಮಿಗಳ ದರ್ಶನವೂ ಆಯಿತು. 'ನನಗೆ ಸಾಧನಾದ ಹಾದಿ ತೋರಸರೀ' ಅಂತ ದುಂಬಾಲು ಬಿದ್ದ ದ್ಯಾವಪ್ಪನಿಗೆ ಅವರು ಹೇಳುತ್ತಾರೆ:

"ಹುಚ್ಚಪ್ಪಾ.. ಏಳು. ನೀನು ನಡೆದದ್ದ ಹಾದಿ ಐತಿ.. ಅದ ನಿನ್ನ ಸಾಧನಾ ..ವರ್ಷಾ ವರ್ಷಾ ಎಂಟ್ ಹತ್ತ ಹನೀ ರಗತ ಅಂದರ ಅದೇನ ಕಡಿಮಿ ಅಲ್ಲ...... ನೂರ ದೀಡನೂರ ವರ್ಷಕ್ಕೆಂದರ ಒಬ್ಬ ಮನಶಾನ ರಗತದಷ್ಟೆ ಆದೀತು......! ಹಾಂ...... ಇರಲಿ ತಗೋ...... ಇರಬಿ ಆದಿಯಾಗಿ ಎಂಭತ್ತ ಕೋಟಿ ಯೋನಿಯೊಳಗ ದಾಟಿ ಬಂದ ಜೀವ ಇದಾ.. ಒಂದೊಂದ ಯೋನಿಯೊಳಗ ಈ ಜೀವನ್ನುದು ಎಷ್ಟ ಸರತೇ ಜನಮಾ ಎತ್ತಿರತೈತ್ಯೋ ಯಾಂವ ಬಲ್ಲ? ಅಂದಮ್ಯಾಗ ಆ ಎಲ್ಲಾ ಜನಮಗೋಳದೂ ರಗತದಾಗ ಕಸರ ಉಳದಿರಬೇಕಲಾ...... ಆ ಕಸರ ನೋಡಿಕೋರಿ...... ಮದಲ ರಗತದಾಗಿನ ಈ ಕಸರ ಬಗೀಹರಿಸಿಕೋರಿ......" ಅಂತ ಆಶೀರ್ವಾದ ಮಾಡಿ ಗಿಡಗೋಳ ನಡಕ ಗಪ್ಪಗಡದ್ದ ಆದರಂತ....... ದ್ಯಾವಪ್ಪ ಅದನ್ನ ಮನಸಿನ್ಯಾಗ ಇಟಗೊಂಡು ಹೊಳ್ಳಿ ಊರಿಗೆ ಬಂದಿದ್ದ...... ರಕ್ತಶುದ್ಧಿ ಮಾಡಿಕೊಳ್ಳುವುದು ಹೇಗೆಂಬುದು ಅವನಿಗೊಂದು ದೊಡ್ಡ ಶೋಧನೆಯ ಸಂಗತಿಯಾಯಿತು. ಶಂಕರಜ್ಜನ ಸೂಚನೆಯಂತೆ ಮುಂಗಾರಿ ಕಾಯಿಯ ಬೀಜದ ಪುಡಿಯನ್ನು ಮಜ್ಜಿಗೆಯಲ್ಲಿ ನೆನೆಸಿಟ್ಟು ಸೇವಿಸುವುದು, ಪುಣ್ಯಕ್ಷೇತ್ರಗಳಿಗೆ ಪಾದಯಾತ್ರೆ ಮಾಡಿ ತೇರಿನ ಮುನ್ನಾದಿನ ಧರಮನಟ್ಟಿ ತಲುಪುವುದು...... ಹೀಗೆ. ಅವನ ಆಚರಣೆಗೊಂದು ವಿಶೇಷ ಧಾರ್ಮಿಕ ರೂಪ ಬಂತು. ಅವನು ನಿರ್ಮಿಸಿಕೊಂಡ ಈ ಧಾರ್ಮಿಕ ಚೌಕಟ್ಟು ಮತ್ತು ಅದರ ಪರಿಣಾಮಗಳನ್ನು ಗಮನಿಸಿ:

"ಅಂವ ಬರೂಕಿಂತಾ ಮದಲನೇ ದಿವಸನ ಲಗಮವ್ವ ಮಕ್ಕಳನೆಲ್ಲಾ ಕಟಿಗೊಂಡು ಧರಮನಟ್ಟಿಗೆ ಬಂದಿದ್ದಳು.. ಆಕಿ ಅಲ್ಲಿ ಬಂದಾಕಿ ವಿಠ್ಠಲ ದೇವರ ಗುಡಿಯ ಪೂಜಾರಿಗೆ ತನ್ನ ಗಂಡ ಮಡಿಯಿಂದ ಯಾತ್ರೀ ಮಾಡಿ–ಎಲ್ಲಾ ದೇವರಗೋಳ ದರಶನಾ ಮಾಡಿಕೊಂಡು ಬಂದು ರಗತ ತಿಲಕದ ಸೇವಾ ಮಾಡಲಿಕ್ಕೆಂತ–ಹೋಳೀಹುಣ್ಣಿವಿ ಇನೂ ಎರಡ ದಿವಸ ಐತಿ ಅನ್ನೂವಾಗನ ಕಳ್ಳೀಗುದ್ದೀ ಬಿಟ್ಟು ಹೋಗ್ಯಾನೆ.. ಅಂವ ನಾಳೆ ಷಷ್ಟಿಯ ದಿವಸ, ಹೊತ್ತು ಮುಣಗೂ ಯಾಳೇಕ್ಕಂದರ ಧರಮನಟ್ಟಿಗೆ ಬರತಾನೆ ಅನ್ನುವದನ್ನ..ದ್ಯಾವಪ್ಪ ಲಂಗಟದ

ಸ್ವಾಮಿಗೋಳ ಅಪ್ಪಣೀ ಪರಕಾರ ರಗತಾ ಸುದ್ದ ಮಾಡಿಕೊಂಡದ್ದನ್ನ–ಅದರ ಆಗಸುದ್ದೇ ಮತ್ತ ಪತ್ಯೇದ ಎಲ್ಲಾ ಆಚಾರಗಳ ಸುದ್ದಿಯನ್ನ ಮೊದಲು ಮಾಡಿಕೊಂಡು.. ಎಲ್ಲಾ ಸಂಗತಿಗಳನ್ನೂ – ಆಕಿ ಆಗದೀ ರೋಚಕ ಮಾಡಿ ಹೇಳಿದ್ದಳು.. ಈ ಎಲ್ಲಾ ಸಂಗತಿ ಕೇಳಿ ಪೂಜಾರಿಗೆ ಭಾಳ ಸಂತೋಷ ಆತು.. ಅಂವ ಹೋಗಿ ಕಾರಭಾರಿಗಳಿಗೆ ತಿಳಿಸಿದ. ಕಾರಭಾರಿಗಳು – ಹಾಂ ಹಾಂ! ಯೋಗ್ಯ ಆದ್– ಯೋಗ್ಯ ಆದ ಅಂತ ಎರಡೆರಡು ಸರತೇ ಉದ್ಗರಿಸಿ–ಡಂಣಾಯಕರನ್ನ ಕರೆಸಿ–ರಕ್ತ ತಿಲಕದ ಸೇವಾ ನಡಸೂ ದ್ಯಾವ್ಯಾನ ಹೇಂತೀ– ಮಕ್ಕಳೂ ಬಂದಾರಂತೆ.. ಅವರಿಗೆ ಧರ್ಮಸಾಲ್ಯಾಗ ಇಳಕೊಳ್ಳಲಿಕ್ಕೆ ವ್ಯವಸ್ಥಾ ಮಾಡಬೇಕು.. ಉಗ್ರಾಣದಿಂದ ಅವರಿಗೆ ಅಕ್ಕೀ–ಗೋದೀ–ಬ್ಯಾಳೀ ಬೆಲ್ಲಾ ಅಡಗೀ ಸಾಮಾನು ಎಲ್ಲಾ ಸಾಂಗವಾಗಿ ಸರಬರಾಜು ಮಾಡಲಿಕ್ಕೆ ನಾ ಹೇಳೀನಂತ ತಿಳಸಿ ವ್ಯವಸ್ಥಾಮಾಡಬೇಕು–ಅಂತ ಹೇಳಿಕಳಿಸಿದರಂತ.. ಲಗಮವ್ವನಿಗೆ ಗಂಡನ ಯಾತ್ರಾದ ಮಹತ್ವ ತಿಳಧಂಗ ಆತು..ತೇರಿಗೆ ಬಂದ ಮಂದಿಗೂ ದ್ಯಾವಪ್ಪ ಕಟ್ಟುನಿಟ್ಟಿನ ಮಡಿಯಿಂದ ಯಾತ್ರಾ ಮಾಡಿಕೊಂಡು ತೇರಿನ ಸೇವಾಕ್ಕ ಬಂದಾನನ್ನುವ ಮಾಹಿತಿ ತಿಳದು ಅವನ ಬಗ್ಗೆ ಭಕ್ತಿ ಅಂಬುವದು ಹುಟ್ಟಿತು.. ಉತ್ತಮ ಕುಲದವರು 'ನಮಸ್ಕಾರ ದ್ಯಾವಪ್ಪಾ..' ಅಂತ ಕೈಜೋಡಿಸಿದರೆ ಕಾಟುಕ ಜಾತಿಯವರು ದ್ಯಾವಪ್ಪನ ಕಾಲು ಮುಟ್ಟಿ ನಮಸ್ಕಾರ ಮಾಡಲಿಕ್ಕೆ ಸುರುಮಾಡಿದರು.."

"ದ್ಯಾವಪ್ಪ ವರ್ಷಾ ವರ್ಷಾ ರಗತ ತಿಲಕದ ಸೇವಾಕ್ಕ ಬರೂದಕಿಂತಾ ಮೊದಲು– ಯಾವ ದಿನದಿಂದ ರಗತಾ ಸುದ್ದ ಮಾಡಿಕೋಲಿಕ್ಕೆ ಆಗಸುದ್ದೇ ಸುರೂ ಮಾಡಬೇಕು–ಯಾವ ಯಾವ ದಿನಾ ಯಾವ ಆಗಸುದ್ದೇ ತಗೋಬೇಕು.. ಮತ್ತ ಯಾವ ದಿನ ಯಾತ್ರಿಗೆ ಹೊಂಟು ಯಾವ್ಯಾವ ದಿನಾ ಎಲ್ಲೆಲ್ಲಿಗೆ ಹೋಗಬೇಕು–ಎಲ್ಲೆಲ್ಲಿ ವಸ್ತೀ ಮಾಡಬೇಕು ಅನ್ನುವುದನ್ನ– ಧರಮನಟ್ಟಿಗೆ ಯಾವ ಹಾದೀಲೇ ಎಂದು ಬಂದು ಸೇರಬೇಕನ್ನೂದನ್ನ–ಎಲ್ಲವನ್ನೂ ಲಗಮವ್ವನಿಗೆ ಸವಿಸ್ತಾರವಾಗಿ ಹೇಳಿ 'ಇದನ್ನನೀ ಒಟ್ಟ ಮರೀಬ್ಯಾಡ.. ಮುಂದ ನಿನ್ನ ಮಕ್ಕಳೂ – ಮಮ್ಮಕ್ಕಳೂ ಸ್ವಾಮಿಯ ಸೇವಾದ ಪಟ್ಟಕ್ಕ ಬಂದಾಗ ಅವರು ಇದ ಪರಕಾರನ ನಡಕೊಂಡ ಹೋಗಬೇಕು..' ಅಂತ ತಿಳಿಸಿದ..ಲಗಮವ್ವ 'ಹೂಂ..' ಅಂತ ಗೋಣು ಹಾಕಿದಳು."

ಮುಂದೆ ದ್ಯಾವಪ್ಪ ತೀರಿಕೊಂಡಾಗ ದೇಸಾಯರ ಸ್ವಂತ ಕಹಳೆಯವನೇ ಅಂತ್ಯ ಸಂಸ್ಕಾರಕ್ಕೆ ಕಹಳೆ ಸೇವೆ ಮಾಡಿದನಂತೆ. ಉಂಬಳಿಯ ಹೊಲದಲ್ಲಿ ದ್ಯಾವಪ್ಪನನ್ನು ದಫನ್ ಮಾಡಿ ಗದ್ದಿಗೆ ಕಟ್ಟಿಸಿ ಲಿಂಗ ಮತ್ತು ಬಸವಣ್ಣನ ಸ್ಥಾಪನೆ ಮಾಡಲಾಯಿತಂತೆ. ಪಾಳೇಗಾರಿಕೆ

ತನ್ನ ವ್ಯವಸ್ಥೆಯನ್ನು ಬಲಪಡಿಸಲು ಮಾಡುವ ಹೊಂಚುಗಳಿವು ಎಂಬುದೂ ಸ್ಪಷ್ಟ.

ಇವೆಲ್ಲ ಆಗಿ ಒಂದಷ್ಟು ವರ್ಷಗಳೇ ಕಳೆದಿರಬೇಕು. ಒಂದು ಮಧ್ಯಾಹ್ನ ಕಳ್ಳೀಗುದ್ದಿಯ ದ್ಯಾವಪ್ಪನೆಂಬ ಯುವಕ ಬೆಂಗಳೂರಿನಲ್ಲಿ ನಿರೂಪಕನನ್ನು ಭೇಟ್ಟಿ ಮಾಡುತ್ತಾನೆ. ಆತ ಗೊಂಬೀರಾಮರ ಮನೆತನದವನು. ನವನಿರ್ಮಾಣ ಚಳವಳಿಯಲ್ಲಿ ಪಾಲ್ಗೊಂಡು, ಜೈಲು ಸೇರಿ, ಈಗ ಬಿಡುಗಡೆಯಾಗಿ ಬಂದಿದ್ದಾನೆ. ಹಳೆಯ ನಂಬಿಕೆಗಳು ಅವನಲ್ಲಿ ಉಳಿದಿಲ್ಲ. ಹೊಸ ವ್ಯವಸ್ಥೆ ಸೃಷ್ಟಿಸಿರುವ ಸಮಸ್ಯೆಗಳ ಕುರಿತೂ ಅವನಿಗೆ ಬೇಸರವಿದೆ, ಅದರಿಂದ ಅವನು ಸ್ವತಃ ತೊಂದರೆಯನ್ನೂ ಅನುಭವಿಸಿದ್ದಾನೆ. ಆ ಭಾಗಗಳನ್ನೊಂದಿಷ್ಟು ನೋಡಬಹುದು:

’ಇದ ವ್ಯವಸ್ಥಾ ಏನರೀ ಸಾಹೇಬರ..ಇದು ಹೆಂತಾ ವ್ಯವಸ್ಥಾ? ಇಲ್ಲಿ ನೋಡರಿ..ಈ ಬೆಂಗಳೂರಿನ್ಯಾಗ ಎಲ್ಲ ಕಡೆ ಝಗ–ಮಗ ಅಂತ ಬೆಳಕು ಚೆಲ್ಯಾಡಿ ಹಾದೀಗುಂಟ ಹರೀತೈತಿ.. ಇಡೀ ಊರಿಗೆ ಊರ ಚಲಸಾಕತೈತಿ ಅನ್ನೂ ಹಂಗ ರಸ್ತಾದ ತುಂಬ ಬಸ್ಸೂ–ಕಾರಗಾಡೀ ಮತ್ತ ಮೋಟರ ಸೈಕಲ್ಲಗೋಳು ಭರಂಡೀ ಹೋಗತಾವು.. ಅಲ್ಲಿ ನಮ್ಮ ಊರಗೋಳೊಳಗ ನಿಮಗ ಗೊತ್ತ ಐತೆಲ್ಲರೀ.. ಅಲ್ಲಿ ಕತ್ತಲಿ ತುಂಬೇತಿ.. ಚಿಮಣೀ ಬುಡ್ಡಿಗೆ ತಟಕ ಎಣ್ಣಿ ಸಿಗೂದುಲ್ಲ..ಇಡೀ ಊರಿಗೆ ಊರ ಕುಂಟ ಬಿದ್ದದಾವು..’ ಅಂತಂದು ಮುಖಾ ತೆಳಗ ಮಾಡಿದ. ಅಂವಗ ತೇಕ ಹತ್ತಿದಂಗ ಆಗಿತ್ತು. ನಾನು ಅವನ ಮುಂದಿನ ಮಾತಿಗೆ ಕಾಯ್ದೆ.. ಅಂವ ಒಂದು ಮಿನಿಟು ಸುಮ್ಮನೇ ಕೂತವ ಮತ್ತೆ ಮುಖಾ ಮ್ಯಾಲಕೆತ್ತಿ ಮಾತಾಡಿದ:

’ಟೆನೆನ್ಸೀ ಬಂತು ಖರೇ ಬಡವರಿಗೇನು ದಕ್ಕಲಿಲ್ಲ..ನಮ್ಮ ಜಮೀನು ನಮ್ಮ ಊರ ಗೌಡಗ ಹೋತು..ಅಂವಗ ಐವತ್ತ–ಅರವತ್ತ ಎಕರೇ ಭೂಮಿ ಐತಿರೀ. ಅದರ ಕಾಯ್ದೇಕ್ಕ ಹೆಂಗ ಟಾಂಗ ಕೊಡಬೇಕಂತ ಯಾವ ವಕೀಲನಕಿಂತಾ ಹೆಚ್ಚ ಜ್ಞಾನ ಐತಿ ಅಂವಗ.. ನನಗಿಂತಾ ಕಮ್ಮ ವಯಸ್ಸಿನ ತನ್ನ ಮಗನ್ನ ನಮ್ಮ ಹೊಲಕ್ಕ ಟೆನೆಂಟ ಅಂತ ಮಾಡಿ ಡಿಕ್ಲೆರೇಶನ್ ಕೊಡಿಸ್ಯಾನರಿ..ಹದಿನೆಂಟ ವರ್ಷದ ಹುಡಗ ಹದಿನೈದ ವರ್ಷದ ಹಿಂದಿಂದ ನಮ್ಮ ಹೊಲಾ ಹೊಡ್ಯಾಕತ್ಯಾನಂತ..! ಅಲ್ಲಿ ಗೋಕಾಂವೀ ರಾಮದುರ್ಗದಾಗ ಟ್ರಿಬ್ಯೂನಲ್ಲಗೋಳ ಅದಾವ ನೋಡ್ರಿ.. ಆ ಟ್ರಿಬ್ಯುನಲ್ಲಗೋಳಂದರ ಈ ಎರಡೂ ಬಿಲ್ಡಿಂಗಗೋಳ ಮರಿಗೋಳು! ಆತ ಬಿಡ್ರಿ..’ ಅಂತ ಮತ್ತೆ ಮುಖಾ ತೆಳಗ ಹಾಕಿದ.. ನನಗ ಒಂದ ನಮೂನಿ ಶಾಕ್ ಆದಂಗ ಆತು.. ಅವನ ಮಾತುಗಳನ್ನ ಅರ್ಥಾ ಮಾಡಿಕೋಲಿಕ್ಕೆ

ಪ್ರಯತ್ನಿಸುತ್ತಿದ್ದವನಂತೆ ನಿಶ್ಚೇಷ್ಟಿತನಾಗಿ ಕೂತೆ..

'..ಮಳೀ ಇಲ್ಲದಿರಕ ಹೊಟ್ಟಿಗೆ ಕ್ಯಾರಾ ಹಾಕೋಬೇಕಾಗತ್ತೈತೀ.. ಕುಲದ ಕಸಬು ಬಿಡಬ್ಯಾಡಾ.. ಹತ್ತ ಊರು ಅಡ್ಯಾಡು.. ಹತ್ತ ಊರ ಅಡ್ಯಾಡಿದರ ನಿನ್ನ ಹೊಟ್ಟಿ ತುಂಬತ್ತೈತಿ.. ಈ ಹೊಲಾ ನೆಂಬಿಕೊಂಡರ ಹೊಟ್ಟಿಗೆ ಕ್ಯಾರಾ ಹಾಕೋಬೇಕಾಗತ್ತೈತಿ ನೋಡು ಅಂತ ನಮ್ಮ ಅಜ್ಜಗೋಳಿಗೆ ಈ ಗೌಡನ ಅಜ್ಜಗೋಳು ಹೇಳಿದರಂತ.. ಅಂದಿಂದನ ಬಲೀ ನೇಯಾಕತ್ತಿದ್ದರವರು..ನಮ್ಮ ಅಜ್ಜಗೋಳು ಹುಚಪ್ಯಾಲಿಗೋಳು ಇದ್ದಿರಬೇಕು..! ಗೌಡರು ಹೇಳಿದ್ದು ಆಗದೀ ವಾಜಮಿಯ ಮಾತು ಅಂತ ಜೋಳಿಗೀ ಕಟಿಗೊಂಡು, ತೊಗಲಿನ ಗೊಂಬಿಗೋಳ ಪೆಟಗೀ ಹೊತಗೊಂಡು ಊರೂರು ಅಡ್ಯಾಡಿ ರಾಮಾಯಣಾ–ಮಹಾಭಾರತಗೋಳನ ಕಥೀ ಮಾಡಿ ಹೇಳಿದರು.. ದುಶ್ಯಾಸನ ದ್ರೋಪದಿಯ ಜಡೀ ಹಿಡದು ಎಳಕೊಂಡು ರಾಜಸಭಾಕ್ಕ ತಂದದ್ದನ್ನ– ದುರ್ ಯೋಧನ ಧರ್ಮರಾಜಗ ಸ್ವಂತ ಅಪ್ಪಗ ಹುಟ್ಟಿದ ಮಗಾ ಅಲ್ಲ ನೀನಾ.. ನಿನಗ ಒಂದ ಇಂಚು ಸೈತ ಜಾಗಾ ಕೊಡೂದುಲ್ಲ ಹೋಗಲೇ.. ನೀಯೇನ ನಮ್ಮ ಕುಲದ ಸಂತಾನ ಅಲ್ಲ ಅಂತ ಜಾಡಿಸಿ ಒಕ್ಕೊಟ್ಟದ್ದನ್ನ ಕಥೀ ಮಾಡಿ ಹೇಳೂವಷ್ಟೊತ್ತಿಗೆ ಇವರ ಹೊಲಾನ ಹೋತು! ಅತ್ತ ತೊಗಲ ಗೊಂಬಿಗೋಳೂ ಹೋದೂ ಇತ್ತ ಹೊಲಾನೂ ಹೋತು......"

ಹಾಗೆಯೇ 'ತೇರಿನ ಸೇವಾ'ದ ನಿರರ್ಥಕತೆ ಕುರಿತೂ ಅವನು ಯೋಚಿಸಿದ್ದಾನೆ:

"......ನಮ್ಮ ಅಜ್ಜಗೋಳು ವಿಠ್ಠಲನ ಭಕ್ತರು ಕೊಟ್ಟಿದ್ದನ್ನ ಚಕಡ್ಯಾಗ ಹೇರಿಕೊಂಡು ಬರತ್ತಿದ್ದರು ಅಂತ ನಮ್ಮ ಅಪ್ಪ ಹೇಳತಿದ್ದ......ಆಗ ಕೊಡವರು ಅದನ್ನ ಭಕ್ತೀ ಅಂತ ಕೊಡತಿದ್ದರು ಮತ್ತ ಇಸಗೋಳಾವರು ಅದನ್ನ ಭಿಕ್ಷಾ ಅಂತ ಅನಕೋತಿದ್ದಿಲ್ಲ...... ಮುಂದ ಕೊಡವರಿಗೆ ಅದು ಭಿಕ್ಷಾ ಅಂತ ತಿಳೀತು...... ಕೊಡೂದನ ಬಂದ ಮಾಡಿದರು...... ಈಗ ಮಂದಿಗೆ ದೇವರ ಖರೇ ಹಕೀಕತ್ತು ತಿಳದೈತಿ. ಹಿಂಗಾಗಿ ಕೊಡೂದೂ ಗಿಡೂದೂ ಬಂದ ಮಾಡ್ಯಾರು...... ಅವರದೇನ ತಪ್ಪ ಅಲ್ಲರೀ...... ದೇವರೂ ದಿಂಡರೂ ಎಲ್ಲಾ ಔಟ್ ಆಫ್ ಡೇಟ ಆಗ್ಯಾವರೀ...... ಔಷಧದ ಬಾಟಲೇ ಮ್ಯಾಗ ಹಾಕಿರತಾರ ನೋಡರಿ...... ಎಕ್ಸ್ ಪೈರೀ ಡೇಟು...... ಹಂಗ!....... ಹಿಂತಾ ದೇವರ ತೇರಿನ ಸೇವಾ ಮಾಡಿಕೋತ ನಿರುಪಯೋಗಿ ಆಗಿ ಹಾಳ ಆಗಲಿಕ್ಕೆ ಬಿಡದ ನಮ್ಮಂಥಾ ಹುಡಗೋರಿಗೆ ದುಡೀಲಿಕ್ಕೆ ಕೆಲಸಾ ಕೊಡಬೇಕರಿ......".

ತನ್ನ ತಂದೆ ತೇರಿನ ಸೇವಾ ಮಾಡಿದ ಬಗೆಯನ್ನು ದ್ಯಾವಪ್ಪ ವರ್ಣಿಸುತ್ತಾನೆ:

"ನಮ್ಮ ಅಪ್ಪ ಧರಮನಟ್ಟಿಯ ತೇರು ಇನೂ ಹದನ ದಿನಾ ಐತಿ ಅಂತಿರಬೇಕಾದರ ಯಾತ್ರಾಕ್ಕ ಹೋಗೂದನ್ನ ತಪ್ಪಿಸಿ ಮನ್ಯಾಗ ಅಡಿಕ್ಕೊಂಡು ಬಿಡತಿದ್ದನರೀ..! ಒಳಗ ಅಡಿಗೀಮನ್ಯಾಗ ಕುಂಡ್ರಾವ!.. ಹೊತ್ತು ಮುಣಿಗಿ ಕತ್ತಲಿ ಐತಿ ಅನ್ನುವಾಗ ಚರಿಗೀ ತಗೊಂಡು ಹೋಗಿ ಬರತಿದ್ದ.. ಮಂದಿ ಕೇಳಿದರ ಮನ್ಯಾನ ಮಂದಿ ಎಲ್ಲಾ–ಅಂವ ಧರಮನಟ್ಟೀ ತೇರಿನ ಸೇವಾದ ಯಾತ್ರಾಕ್ಕ ಹೋಗ್ಯಾನ ಅಂತ ಸುಳ್ಳ ಹೇಳತಿದ್ದಿವಿ.. ಹಿಂಗ್ಯಾಕ ಅಡಿಕ್ಕೊಳ್ಳೂದೂ– ನಾವೇನ ಯಾರ ಗಂಟ ತಿಂದದೀವ ಏನ ಅಂತ ಕೇಳಿದರ–ಏಏ.. ಹಂಗಲ್ಲ..ಹಿಂದಿಂದ ನಡಕೊಂಡು ಬಂದ ಪದ್ಧತೀ ಐತಿ–ಅಂತ ಹೇಳತಿದ್ದ.. ಪದ್ಧತೀ ಬಿಡೂ ದಮ್ಮ ಇಲ್ಲದಿರಕ ಅದನ್ನ ಬರಾಬ್ಬರೀ ನಡಸ ಹಂಗರ. ಇದೆಂಥಾ ಹೇಸಿ ಕೆಲಸಾ..ಬಿಟ್ಟಂಗೂ ಅಲ್ಲಾ ನಡಿಸಿಧಂಗೂ ಅಲ್ಲ ಅಂತ ಅಂದರ ಬಾರಾ ಖೂನ ಮಾಡಿದ ಅಪರಾಧೀ ಹಂಗ ಸುಮ್ಮನ ಕುಂತ ಬಿಡತಿದ್ದಾ..! ಷಷ್ಟೀ ದಿವಸ ಬೆಳ್ಳೀ ಚಿಕ್ಕಿ ಮೂಡೂಕಿಂತಾ ಮದಲ ಊರು ಬಿಟ್ಟು ಹೊತ್ತು ಮುಣಗೂ ಹೊತ್ತಿಗೆ ಕರಕ್ಯಾಗಿ ಧರಮನಟ್ಟಿಯ ಪಡೂ ದಿಕ್ಕಿಗೆ ಮೂಡತಿದ್ದ..!' ..ಕುಬೇರಪ್ಪನ ಯಾತ್ರಾದ ಕಥೀ ಕೇಳಿ ನಾನು ಒಂದು ಕ್ಷಣ ದಂಗಾಗಿ ಅಮ್ಯಾಲ–ಖೊಕ್ ಖೊಕ್ಕಂತ ನಕ್ಕೆ.. ದ್ಯಾವಪ್ಪ ಒಮ್ಮಿಗೆಲೇ ನನ್ನ ದುರುಗುಟ್ಟಿ ನೋಡಿಧಂಗ ಅನಿಸಿತು.. ಸ್ವಿಚ್ ಒತ್ತಿಧಂಗ ನಾನು ನನ್ನ ನಗಿಯನ್ನ ನಿಲ್ಲಿಸಿದೆ.."

ಯುವಕ ದ್ಯಾವಪ್ಪ ದೇವರ ಮೇಲಿನ ವಿಶ್ವಾಸ ಕಳೆದುಕೊಂಡಿರುವುದಷ್ಟೆ ಅಲ್ಲ, ಹಿಂದೆ ಸರಳ ಮನಸಿನ ಭಕ್ತರು ಶ್ರದ್ಧೆಯಿಂದ ನಡೆದುಕೊಂಡ ತಾಣಗಳೂ ಈಗ ಪವಿತ್ರವಾಗಿ ಉಳಿದಿಲ್ಲ ಎಂಬುದನ್ನೂ ತಿಳಿದವನಾಗಿದ್ದಾನೆ.

"ಹೂಂ.......! ಸ್ವತಾ ನಾನ...... ಈಗ ಎರಡ ವರ್ಷ ನಮ್ಮ ಮೂಲಮುತ್ಯಾ ಏನು ಹಾದೀ ಹಾಕಿಕೊಟ್ಟಿದ್ದ ನೋಡರಿ...... ಅದ ಪ್ರಕಾರನ ಅಗದೀ ನಿಷ್ಠಾದಿಂದ ಸೇವಾ ನಡೆಸಿದನರೀ...... ಒಳಗಿಂದು ಶುದ್ದ ಮಾಡಿಕೂಳ್ಳುವ ಆಚಾರಾ–ಯಾತ್ರಾ......ಎಲ್ಲಾನೂ ಅಗದೀ ನಿಷ್ಠಾದಿಂದ ನಡಿಸಿದಿನಿ...... ಆದರ ನನ್ನ ಮನಸಿಗೇ ಎಲ್ಲಾ ವ್ಯರ್ಥ ಅನಿಸಿತರಿ.. ಗೂಗೀ ಕೊಳ್ಳದಾಗ ಈಗ ಯಾವ ಸಿದ್ಧರೂ ಕಾಣೂದುಲ್ಲ......ಅಲ್ಲಿ ಈಗ ಕಳ್ಳರು ಅಡಗಿಕೊಂಡಿರತಾರರಿ.. ನವಲತೀರ್ಥದಾಗ ಗಂಗವ್ವ ಈಗ ಸೆಳವ ಕಳಕೊಂಡಾಳರಿ.. ಆಕೀ ಕಾಲಗೋಳನ ಮುರದ್ದಾರು! ಮುನ್ನೋಳೀ ಹಂತೇಕ ನೀವು ನೋಡಬೇಕರೀ.. ನದೀ

ಅಂಬುವ ಜಾಗಾದ ತುಂಬ ಆಪು ಬೆಳದು ದರಿಗಟ್ಟ.. ನೀರು ಕೊಳತ ನಾರತೈತಿ! ಪಂಚಲಿಂಗೇಶ್ವರನ ಗುಡಿಯ ಅಂಗಳಕ್ಕ ಹೋಗೂ ಹಾದೀಗುಂಟ ಏನ್ ಅದಾವು ಹೇಳ್ರಿ.. ಬಾರಗೋಳು ಮತ್ತ ಶರೇದ ಅಂಗಡಿಗೋಳು......! ನಡನಡಕ ತೋರಣಾ ಕಟ್ಟಿರತಾರು..! ಮಾವಿನ ಎಲಿಯ ತೋರಣ ಅಲ್ಲರೀ ತಂಬಾಕಿನ ಪಾಕೀಟಗಳ ಸರಪಳೀ ತೂಗು ಹಾಕಿದ ತೋರಣಾ!".

"ತೆಲೀಮ್ಯಾಲ ಬದಾ ಬದಾ ಅಂತ ಬಿಸಲು ಸುರೀತಿದ್ದರೆ ನೆಳ್ಳಿಗಿಂತ ಯಾರದರೇ ಮನೀ ಕಟ್ಟಿಗೆ ಹೋದರ ಆ ಮನಿಯವರು ಸಟಕ್ಕನ ಬಾಗಲಾ ಹಾಕ್ಕೋತಾರರಿ..ಬಾಯಾರಿಸಿ ನೀರ ಕೇಳಿದರ ಒಂದ ಚರಿಗಿ ನೀರು ಸಿಗೂದುಲ್ಲರಿ.. ಚಾದ ಅಂಗಡಿಗೆ ಹೋಗೂ ಅಂತ ಹೇಳತಾರ..ಅವರರ ಏನ ಮಾಡ್ಯಾರರೀ.. ಎರಡ ಮೂರು ದಿನಕ್ಕ ಒಮ್ಮೆ ನಳಾ ಬಂದಾಗ ಅವರಿಗೆ ನೀರು.. ಮತ್ತ ಎಂದ ನಳಾ ಬಿಡರಾತೋ ಅಂತನ್ನೂ ಅಂಜಿಕಿ ಎಲ್ಲಾರಿಗು.. ನಾ ಎರಡ ವರ್ಷ ಅಗದೀ ನಿಷ್ಠಾದಿಂದ ಆಗದೀ ಭಕ್ತೀಲಿಂದ ಯಾತ್ರ ಮಾಡಿದಿನರಿ..ಅದರ ಯಾವ ಒಂದ ದೇವಸ್ಥಾನದೊಳಗನೂ-ಒಂದು ಕ್ಷೇತ್ರದಾಗಾದರೂ ದೇವರಿದ್ದಾನಂತ ಅನ್ನೂ ಭಾವನಾ ನನಗ ಬರಲಿಲ್ಲ ನೋಡ್ರಿ.. ನನ್ನ ಹಂತೇಕ ಭಕ್ತಿ ಐತಿ-ರೊಕ್ಕ ಇಲ್ಲ ಅಂತ ದೇವಸ್ಥಾನಗೋಳಿಗೆ ಹೋದರ ಅಲ್ಲಿ ಪೂಜಾತಿಗೋಳು-ಹೋಗೋ ಮಕಳೀ ಹೋಗು ಅಂತ ಚಂಡಮ್ಯಾಲ ಕೈಕೊಟ್ಟು ಹೊರಗ ನುಗಸತಾರು.. ಗುಡೀ ಅನ್ನುವದರೊಳಗ ದೇವರುಗಳೆಲ್ಲಾ ಕಲ್ಲ ಮೂರತಿ ಆಗಿ ನಿಂತಾವರೀ ಸಾಹೇಬರ..!"

ಕಾದಂಬರಿಯ ನಾಲ್ಕನೇ ಭಾಗ ಮತ್ತು ಐದನೇ ಭಾಗಗಳು ನಿರೂಪಕ ಸ್ವಾಂವಜ್ಞನ ಒತ್ತಾಯದಂತೆ ಧರಮನಟ್ಟಿ ತೇರಿನ ದೀಡನೂರನೇ ವರ್ಷದ ಆಚರಣೆಗೆ ಆ ಊರಿಗೆ ಬಂದಾಗ ನಡೆದ ನಾಟಕೀಯ ಘಟನೆಗಳ ವಿವರಗಳಿಂದ ಕೂಡಿದೆ. ದ್ಯಾವಪ್ಪ ಈ ಭಾಗದಲ್ಲೆಲ್ಲೂ ನೇರವಾಗಿ ಕಾಣಿಸಿಕೊಳ್ಳದಿದ್ದರೂ ಕಥೆಯ ಗಮನವೆಲ್ಲ ಅವನತ್ತಲೇ ಇದೆ. ಅವನ ಕುರಿತ ಅನೇಕ ವದಂತಿಗಳನ್ನು ನಿರೂಪಕ ಕೇಳಿಸಿಕೊಳ್ಳುತ್ತಾನೆ. ಅವುಗಳಲ್ಲಿ ಬಹ್ವಂಶ ದ್ಯಾವಪ್ಪನ ಕುರಿತು ಸಹಾನುಭೂತಿಯ ಮಾತುಗಳಿಲ್ಲ. ನಿರೂಪಕ ಪಾಟೀಲ ಧರಮನಟ್ಟಿಗೆ ಹೋಗುವ ಪೂರ್ವದಲ್ಲೇ ಮಾಣಿಕ್ ದೇಸಾಯಿ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ತಿಳಿದು ಆತ ಸ್ವಾಂವಜ್ಞನಿಗೆ ಪತ್ರಬರೆದು ವಿಷಯ ತಿಳಿಸುತ್ತಾನೆ. ಧರಮನಟ್ಟಿ ದೇಸಗತಿಯ ಯಜಮಾನಿಕೆಯನ್ನು ಬಿಟ್ಟು ವಿಲಾಯಿತಿ ಹೋಗಿದ್ದರೂ ಮಾಣಿಕನ ಮಹತ್ವವಿರುವುದು ಅವನ ಮತ್ತು ದೇಸಗತಿಯ ಸಂಬಂಧದಲ್ಲೇ. ಆ ಸಂಬಂಧ ಅವನು ತೊರೆದಾಗಲೂ ಒಂದು

ನೆಲೆಯಲ್ಲಿ ಉಳಿದಿರುವಂಥದು. ಅವನ ನಿಧನದ ವಾರ್ತೆಗೆ ಸ್ವಾಂವಜ್ಜನ ಪ್ರತಿಕ್ರಿಯೆ ಮತ್ತು ಸ್ವಾಂವಜ್ಜ ಈ ಘಟನೆಯನ್ನು ಗ್ರಹಿಸುವ ಕ್ರಮ ಕುತೂಹಲಕರವೆನಿಸುತ್ತದೆ:

"......ಧರಮನಟ್ಟಿಯ ತೇರು ಸೂರ್ಯಾ–ಚಂದ್ರಾಮ ಇರುವ ತನಕಾ ನಡೆಯುತ್ತದೆಂದು ದೇಸಾಯರು ಸನದು ಬರೆಸಿದ್ದಾರೆ...... ಅದು ಯಾವತ್ತಿಗೂ ನಿಲ್ಲುವುದಿಲ್ಲ!.

ಮೃತ್ಯು ಪತ್ರದಾಗ ತನ್ನ ಹೆಣವನ್ನ ನಮ್ಮ ನಾಡಿಗೆ ಕಳಸರೀ ಅಂತ ಬರದಿದ್ದರ ಮತ್ತ – ನಮ್ಮ ಪದ್ಧತೀ ಪ್ರಕಾರ ಮಣ್ಣ ಮಾಡರೀ ಅಂತ ಬರದಿದ್ದರ ಅಂವ ಧರಮನಟ್ಟಿಯ ದೇಸಾಯಿ ಆಗಿರತಿದ್ದಾ! ಮತ್ತೆ ಅಂವ ದೇಸಾಯಿ ಆಗಿ ಉಳದಿದ್ದರ ದೇಸಗತಿಯಲ್ಲಿರುವ ನಾವು – ಪ್ರಜಾಮಂದಿಗೆ ಅಂವ ಸತ್ತದ್ದು ಆಗ ಸೂತಕ ಅಗುತ್ತಿತ್ತು.. ಬೇಡಿ ಬಯಸಿ ಆ ಬಿಳೀ ಚರ್ಮದ ಹೆಂಗಸನ್ನ ಮದಿವೀ ಮಾಡಿಕೊಂಡು ಅಜ್ಜಾ–ಮಗನ್ನ ಬಿಟ್ಟು ಅಮೇರಿಕಾಕ್ಕ ಹೋದಾ. ಅಲ್ಲಿಗೆ ಹೋಗಿ ಏನು ಸುಖಾ ಅನುಭೋಗಿಸಿದಾ? ಆ ಬಿಳೀ ಚರ್ಮದ ಹೇಂತಿ ಇವನ್ನ ಒಕ್ಕೊಟ್ಟು ಹೋದಳಲಾ!...... ಕಡೀಕ ನಮ್ಮ ಧರಮನಟ್ಟಿಯ ದೇಸಾಯಿ ಪರದೇಶೀ ಹೆಣಾ ಆದದ್ದು ನಮಗ ಬಾಳ ದುಕ್ಕ ಆಗೇತಿ. ಊರಾನ ವಯಸ್ಸಾದ ಹೆಂಣ ಮ್ಯಾಳದವರು ಅತ್ತೂ ಕರದೂ ಮಾಡಿ ತಮ್ಮ ದುಕ್ಕಾ ತೋಡಿಕೊಂಡಿತು...... ನಮ್ಮಂಥಾ ಮುದುಕರಿಗೆ ಹಂಗ ದನೀ ತಗದು ಅಳಾಕ ಆಗಲಿಲ್ಲಾ! ಒಳಗೊಳಗ ದುಕ್ಕಾ ಪಟಗೊಂಡು ಯಾರ ಜೋಡೀ ಏನೂ ಮಾತಾಡದ ಎರಡ ದಿನಾ ಮನ್ಯಾಗ ಮನಕೊಂಡಿದ್ದಿವಿ.. ಆದರೂ ನಾ ಆಗಳೇ ಹೇಳಿದ ಅಮುಕ ಕಾರಣದ ಸಲುವಾಗಿ ಧರಮನಟ್ಟೀ ನಾಡಿನ ಮಂದಿಗೆ ಇದರ ಸೂತಕ ಇಲ್ಲಾ......"

ಸ್ವಾಂವಜ್ಜನಂಥ ದೇಸಗತಿಯ ಪ್ರಜೆಗಳಿಗೆ ತಮ್ಮ ದೇಸಾಯಿಯೇ ಬಿಟ್ಟು ಹೋದರೂ ದೇಸಗತಿ, ಅಲ್ಲಿಯ ಆಚರಣೆಗಳು ಇವೆಲ್ಲ ಸೂರ್ಯಾ– ಚಂದ್ರಾಮ ಇರುವ ತನಕಾ ಇರತಕ್ಕವು ಎಂದು ಬಲವಾಗಿ ನಂಬಿಕೆ ಇದೆ. ದೇಸಗತಿಯನ್ನು ತೊರೆದು ಹೋದವ ಸತ್ತರೆ ಆ ಸೂತಕವೂ ತಮಗಿಲ್ಲ ಎಂಬ ನಿಷ್ಠುರತೆಗೂ ಆ ನಂಬಿಕೆಯೇ ಕಾರಣ. 'ನಮ್ಮ ಪದ್ಧತೀ ಪ್ರಕಾರ ಮಣ್ಣ ಮಾಡರೀ' ಅಂದಿದ್ದರೆ ದೇಸಾಯಿ ಧರಮನಟ್ಟಿಯವನಾಗುತ್ತಿದ್ದ ಎಂಬ ಭಾವನೆಯೂ ಮೋಜಿನವಾಗಿದೆ. ದೇಸಗತಿಯ ಕುರಿತು ತಲೆಮಾರುಗಳಿಂದ ಮೂಡಿ ಬಂದ ವಿಶ್ವಾಸ ಎಷ್ಟು ದೃಢವಾದುದೆಂದರೆ, ಅದನ್ನು ಧಿಕ್ಕರಿಸಿದ ದೇಸಾಯಿಯನ್ನೂ ಅದು ತನ್ನ

ಕಕ್ಷೆಯಿಂದ ಹೊರಗಿಡುತ್ತದೆ.

ದ್ಯಾವಪ್ಪನ ಕುರಿತು ಊರಲ್ಲಿ ಸಹಾನುಭೂತಿಯ ಮಾತುಗಳಿರಲಿಲ್ಲ ಎಂದು ಹೇಳಿದೆ. ದೇವರಲ್ಲಾಗಲೀ, ತೇರಿನಲ್ಲಾಗಲೀ ವಿಶ್ವಾಸ ಕಳೆದುಕೊಂಡಿರುವ ದ್ಯಾವಪ್ಪನಿಗೆ ರಗತಸೇವೆಯು ಅಸಂಬದ್ಧವೆನ್ನಿಸಿರಬೇಕು. ದ್ಯಾವಪ್ಪ ರಗತ ಸೇವೆಗೆ ಬರಲೇ ಇಲ್ಲ. ವಿಠ್ಠಲ ದೇವಾಲಯದ ಸ್ವಾಮಿಯ ಕಿರೀಟ, ರುಕುಮಾಯಿಯ ಕಿರೀಟ, ವಿಠ್ಠಲನ ಕಣ್ಣಪಟ್ಟಿ, ಭುಜಕೀರ್ತಿ, ಬಂಗಾರದ ನಡಪಟ್ಟಿ ಎಲ್ಲವೂ ಕಳುವಾದ ಸುದ್ದಿ ಊರಿನಲ್ಲೆಲ್ಲ ಹಬ್ಬಿ ಜನರು ಗಾಬರಿಗೊಂಡರು. ರಗತ ಸೇವೆ ಮುರಿದ ದ್ಯಾವಪ್ಪನ ಕುರಿತು ಊರಿನಲ್ಲಿ ನೂರೆಂಟು ಊಹಾಪೋಹಗಳು ಹುಟ್ಟಿಕೊಂಡವು. ಉದಗಟ್ಟಿಯ ಡೊಂಬರ ಹೆಣ್ಣು ಬಾಳವ್ವ ಎಂಬ ವಿಧವೆಯನ್ನು ಮದುವೆಯಾಗಲು ಅವನು ಬಯಸಿದ್ದನೆಂದೂ, ಆದರೆ ದೈವದ ಒಪ್ಪಿಗೆ ಅದಕ್ಕೆ ಸಿಗಲಿಲ್ಲವೆಂದೂ ಬಾಳವ್ವಳ ತಾಯಿಯಿಂದಲೇ ತಿಳಿಯುತ್ತದೆ. ಊರಿನ ನಂಬಿಕೆಗಳಿಗೆ ಹತ್ತಾರು ಕಡೆಯಿಂದ ಧಕ್ಕೆ ಒದಗಿದ ಗೊಂದಲದಲ್ಲಿ ನಿರೂಪಕ ಕುಟುಂಬ ಸಮೇತ ಆ ಊರಿಗೆ ಕೈಗೊಂಡ ಪ್ರವಾಸ ಮುಗಿದಿದೆ. ದೇವಸ್ಥಾನದ ಕಳುವಿನ ಸಂದರ್ಭವನ್ನು ದಿಗ್ ಭ್ರಮೆಯಿಂದ ಹಳ್ಳಿ ಕಂಡ ರೀತಿಯನ್ನು ಗಮನಿಸಿ:

"ಸಾಂವಜ್ಜ ಮತ್ತೇನೂ ಮಾತಾಡಲಿಲ್ಲ..ಅಷ್ಟರಾಗ ಅವರು ಗುಡಿಯ ಮೆಟ್ಟಲಗಳ ಹತ್ತರ ಬಂದಿದ್ದರು..ರೂಢಿಯಂತೆ ಸ್ವಾಂವಜ್ಜ ಬಗ್ಗಿ ನೆಲಾ ಮುಟ್ಟಿ ನಮಸ್ಕಾರ ಮಾಡಿ ಮೆಟ್ಟಲಗಳನ್ನ ಹತ್ತಿ ಗುಡಿಯೊಳಗೆ ಹೊಕ್ಕು..ಗರ್ಭಗುಡಿಯ ಬಾಗಲದಿಂದ ಒಂದು ಮಾರಿನಷ್ಟು ದೂರದಾಗೇ  ನಿಂತು ಒಳಗಿನದನ್ನು ದಿಟ್ಟಿಸಿದ.. ಗರ್ಭಗುಡಿಯಲ್ಲಿಯ ನೂರು ಕ್ಯಾಂಡಲ್ಲಿನ ಬಲ್ಬು ಝಗ ಝಗ ಅಂತ ಬೆಲಕು ಚಲ್ಲಿ– ಅಲ್ಲಿನ ಎಲ್ಲ ವಿವರಗಳನ್ನ ಢಾಳಾಗಿ ಕಾಣುವಹಂಗ ತೋರಿಸತಿತ್ತು..ಕೀಲೀ ಮುರದು ಬಾಗಲಾ ಹಾರು ಹೊಡದದ್ದನ್ನ ನೋಡಿ ಗಾಬರಿ ಆಗಿ ಓಡಿಬಂದಿದ್ದ ಮಾರೋತಿ ಈಗಲೇ ಗರ್ಭಗುಡಿಯೊಳಗಿನ ಪೂರಾ ಹಕೀಕತ್ತು ಕಂಡದ್ದು.. ಅಂವ ಅಲ್ಲಿನ ದೃಶ್ಯವನ್ನ ನೋಡಿ ಪ್ರಲಾಪಿಸತೊಡಗಿದ:"

"ಅಯ್ಯೋ ದೇವರ.. ಸ್ವಾಮಿಯ ಕಿರೀಟ ಒಯ್ದಾರು.. ರುಕುಮಾಯೀದೂ ಕಿರೀಟ ಇಲ್ಲ.. ವಿಠ್ಠಲನ ಕಣಬಟ್ಟ ಕಿರಿಗೊಂಡಾರ ನೋಡೋಯಜ್ಜಾ..ಭುಜಕೀರ್ತೀ ಹೋಗ್ಯಾವು.. ಸ್ವಾಮೀಯ ಎದಿಯ ಕವಚಾ ಉಡದಾರಾ ಹೋಗ್ಯಾವು.. ಬಂಗಾರದ್ದೂ!ತಾಯೀದೂ ಬಂಗಾರದ ಕಣಬಟ್ಟ ಕಿತಿಗೊಂಡಾರು.. ಕಂಠೀ ಸರಾ ಇಲ್ಲ ಗುಳದಾಳಿ ಇಲ್ಲಾ!..ಬಂಗಾರದ

ನಡಪಟ್ಟೆನೂ ಹೋಗೇತಿ.. ಸ್ವಾಮೀದೂ ಮತ್ತ ತಾಯೀದೂ ಇಬ್ಬರದೂ ಬಂಗಾರದ ಪಾದಾ ಕಿತಿಗೊಂಡ ಹೋಗ್ಯಾರು..ಘಾತ ಆತೋ ಯಜ್ಜಾ..ದೇಸಾಯರು ಮಾಡಿಸಿದ ಕಿರೀಟ ಅದಾ!..ಅದರಾಗ ವಜ್ರ ಇದ್ದೂ ಅಂತ..! ಏನಿಂಲ್ಲಂದರೂ ನಾಕೈದ ಲಕ್ಷದ ದಾಗೀನಗೋಳು.. ಎಲ್ಲಾ ಹೋದೂವಲ್ಲೋ ಯಜ್ಜಾ......

ಮಾರೋತಿ ಹಿಂಗ ಪ್ರಲಾಪಿಸತಿದ್ದರೆ–ಸ್ವಾಂವಜ್ಜ ಒಳಗಿನ ದೃಶ್ಯವನ್ನ ನೋಡಿ ದಳ ದಳ ಅಂತ ಕಣ್ಣೀರು ಸುರಿಸಿಕೋತ ಪಿಟ್ಟಂತ ಒಂದಂದರೆ ಒಂದೂ ಮಾತಾಡದೇ..ಕಂಬ ನಿಂತಂಗೆ ನಿಂತಿದ್ದ..ವಿಠ್ಠಲಸ್ವಾಮಿ ಮತ್ತ ರುಕುಮಾಯಿ ಇಬ್ಬರೂ ಕಣ್ಣು ಕಳಕೊಂಡು ಕುರುಡರಾಗಿ ನಿಂತಾರೆ!..ಸ್ವಾಮಿಯ ಉಡದಾರ ಕಿತಿಗೊಂಡದ್ದರಿಂದ ಅಂವ ಉಟಗೊಂಡಿದ್ದ ರೇಶಿಮಿಯ ಮಡಿ ಉದುರಿ ಪೀಠದ ಕೆಳಗ ಬಿದ್ದಿತ್ತು..ರುಕುಮಾಯೀದೂ ನಡಪಟ್ಟಿ ಇಲ್ಲದ್ದಕ್ಕ ಆಕಿ ಉಟಗೊಂಡ ರೇಶಿಮಿಯ ಸೀರಿ ಸೈತ ಜಾರಿ ತೆಳಗ ಬಿದ್ದಿತ್ತು..ದೇವರಿಗೆ ಇಬ್ಬರಿಗೂ ಪಾದನ ಇಲ್ಲ..ವಿಠ್ಠಲ ಮತ್ತ ರುಕುಮಾಯಿ ಇಬ್ಬರೂ ಕಣ್ಣೂ–ಕಾಲೂ..ಕಿರೀಟಾ–ಭುಜಕೀರ್ತಿ..ಎದಿಯ ಕವಚಾ–ಹಾರ–ಸರಗೋಳನ್ ಎಲ್ಲ ಕಳಕೊಂಡು..ಈಗ ಅವರು ಬರೇ ಬತ್ತಲೇ ಆಗಿ..ಕರಿ ಕರೀ ಕಲ್ಲಿನ ಮೂರ್ತಿಗಳಾಗಿ ನಿಂತಾರೆ..!ಸ್ವಾಂವಜ್ಜ .ಅಯ್ಯೋ..ದೇವರ!' ಅಂತ ಉಸರಿ–ಹಂಗೇ ನಿಂತ ನಿಂತಲ್ಲೇ ಕುಸದು ಕುಂತ..

"ಮಾರೋತಿಗೆ ಗಾಬರಿ ಆತು.. ವಯಸ್ಸಾದ ಮನಶಾ.. ಎದೀ ಗಿದೀ ಒಡಕೊಂಡ ಗಿಡಕೊಂಡಾನು ಅಂತ ಅಂಜಿಕಿ ಬಂತು.. ಅಂವ ದೇವರ ಅಭಿಷೇಕಕ್ಕಂತ ತಂದು ಅಲ್ಲೇ ಗರ್ಭಗುಡಿಯ ಬಾಗಲದಾಗ ಇಟ್ಟಿದ್ದ ಕೊಡದಾಗಿನ ನೀರನ್ನ ಚರಿಗ್ಯಾಗ ಬಾಗಿಸಿಕೊಂಡು, ಸ್ವಾಂವಜ್ಜನ ಮಗ್ಗಲಿಗೆ ಕುಂತು–'..ಸಮಾಧಾನ ಮಾಡಿಕೋಯಜ್ಜಾ..ಸಮಾಧಾನ ಮಾಡಿಕೋ..ಪೋಲೀಸರು ನಾಯೀ ತಗೊಂಡು ಬರತಾರು.. ತುಡುಗರು ಸಿಕ್ಕ ಸಿಗತಾರು.. ಸ್ವಾಮಿಯ ದಾಗೀನು ಎಲ್ಲಾ ಸಿಕ್ಕ ಸಿಗತಾವು..'ಅಂತ ಧೈರ್ಯ ಹೇಳಿ'..ಒಂದೀಟ ನೀರ ಕುಡೀ..' ಅಂತ ಅವನ ಮುಂದ ಚರಿಗಿಯನ್ನ ಹಿಡಿದರೆ ಕಂಗೆಟ್ಟು ಕಣ್ಣೀರು ಸುರಿಸಿಕೋತ ಕೂತಿದ್ದ ಅಂವ ಏನೊಂದು ಮಾತಾಡದೇ ಗೋಣು ಹಾಕಿ.. ಬ್ಯಾಡ ಎಂದು ಸೂಚಿಸಿದ.."

ಕಾದಂಬರಿಯ ಕೊನೆಯ ಭಾಗದ ಹೊತ್ತಿಗೆ ನಿರೂಪಕ ನಿವೃತ್ತನಾಗಿ ಬೆಟಗೇರಿಗೆ ಹೋಗಿ ನೆಲೆಸಿದ್ದಾನೆ. ಅವನು ಧರಮನಟ್ಟಿಗೆ ಹೋದರೆ ಸ್ವಾಂವಜ್ಜ ಈಗ ಬದುಕಿ ಉಳಿದಿಲ್ಲ. ಮುಂದೆ ಉದಗಟ್ಟಿಗೆ ಹೋದಾಗ ದ್ಯಾವಪ್ಪನ ಗೆಳತಿ ಬಾಳವ್ವನ ಭೇಟಿಯಾಗುತ್ತದೆ. ಅವಳಿಗೆ

ದ್ಯಾವಪ್ಪ ಬರೆದ ಪತ್ರದಿಂದ ಅವನ ಬಾಳಿನ ಹುಡುಕಾಟಗಳ ಚಿತ್ರಣ ಲಭ್ಯವಾಗುತ್ತದೆ. ಆತ ಈಗ ಬಾಬಾ ಆಮ್ಟೆಯವರ ಆಶ್ರಮ ಸೇರಿದ್ದಾನೆ. ಪ್ರತಿ ತಿಂಗಳೂ ಬಾಳವ್ವಳಿಗೆ ಹಣ ಕಳಿಸುತ್ತಿದ್ದಾನೆ. ಮದುವೆ ಔಪಚಾರಿಕವಾಗಿ ಆಗಿರದಿದ್ದರೂ ತಾವು ವಿವಾಹಿತರೇ ಎಂಬುದು ಅವನ ನಂಬಿಕೆ. ಅವನ ಪತ್ರದ ಕೆಲ ಅಂಶಗಳನ್ನಿಲ್ಲಿ ಗಮನಿಸಬಹುದು:

"ಐದಾರು ತಲೆಮಾರುಗಳಿಂದ ದೇವರ ತೇರಿಗೆ ರಕ್ತತಿಲಕದ ಸೇವಾ ಮಾಡಿಕೊಂಡು ಬಂದ ಮನಿತನದಲ್ಲಿ ಹುಟ್ಟಿ ಬೆಳೆದವನು ನಾನು. ಪುನರ್ಜನ್ಮ ಮತ್ತು ದೇವರು ಅನ್ನುವವು ಇದ್ದಾವೋ ಇಲ್ಲವೋ ಅನ್ನುವುದು ನನಗೆ ಅಖೈರಾಗಿ ಗೊತ್ತು ಆಗುತ್ತಿಲ್ಲ. ಯಾವತ್ತೂ ಸಂಶಯದೊಳಗೆ ಬೇಯುತ್ತಿದ್ದೇನೆ...... ಇನ್ನು ದೇವರು ಅನ್ನುವುದು ಇದ್ದರೆ ಅದರ ವಿರುದ್ಧ ನನ್ನ ಬಂಡಾಯವಿದೆ. ಅದರ ವಿರುದ್ಧ ನನ್ನ ಧಿಕ್ಕಾರವಿದೆ ಮತ್ತು ಅದರ ವಿರುದ್ಧ ನನ್ನ ಸತ್ಯಾಗ್ರಹವಿದೆ.... ಕಾಯಾ ವಾಚಾ ಮನಸಾ ಸಾಧ್ಯವಾಗದ ಬಂಡಾಯ ನಿರರ್ಥಕವಾದದ್ದು."

ದ್ಯಾವಪ್ಪನ ಹುಡುಕಾಟಗಳ ಕುರಿತು, ತನ್ನ ಆತ್ಮೀಯಳಿಗೆ ಅವನು ಬರೆದ ಈ ಪತ್ರಕ್ಕಿಂತ ಹೆಚ್ಚಿನ ಅಧಿಕೃತ ಪುರಾವೆ ಅವಶ್ಯಕವಿಲ್ಲ. ಅವನು ಸಂದೇಹಯುಗದ ಪ್ರತಿನಿಧಿಯಾಗಿದ್ದಾನೆ. ನಂಬಿಕೆಗಳ ಮೇಲೆ ನಿಂತಿರುವ ದೇಸಗತಿಯಾಗಲೀ, ದೈವಭಕ್ತಿಯಾಗಲೀ ಅವನ ಮನಸಿನಲ್ಲಿ ಸ್ಥಾನ ಉಳಿಸಿಕೊಂಡಿಲ್ಲ . ಸೇವೆ ಅವನಿಗೆ ಸಿಕ್ಕಿರುವ ಹೊಸ ದಾರಿಯಾಗಿದೆ. ಸಹಜೀವಿಗಳಿಗೆ ತನ್ನಿಂದಾದ ಉಪಕಾರ ಮಾಡುವ ಆಸೆ ಅವನದು. ಅಂದರೆ, ದ್ಯಾವಪ್ಪ ರಾಜಕೀಯದಲ್ಲೂ ನಂಬಿಕೆ ಕಳೆದುಕೊಂಡಿರಬೇಕು. ಕಾದಂಬರಿಕಾರರು ದ್ಯಾವಪ್ಪನಿಗೆ ತೋರಿಸಿದ ದಿಕ್ಕು ಅವನಂಥ ಪ್ರಾಮಾಣಿಕ ಅನ್ವೇಷಕರಿಗೆ ಅನಿವಾರ್ಯವಾದ್ದು ಎಂದೇ ಹೇಳಬಹುದು. ಅದಲ್ಲದೆ 'ತೇರು' ಚಿತ್ರಿಸುವ ದೇಸಗತಿಯ ಜನರ ನಂಬಿಕೆಗಳ ಜಗತ್ತೂ ಕೂಡ ಲಕ್ಷಿಸಬೇಕಾದ್ದೇ ಆಗಿದೆ. ಲೌಕಿಕ ಪ್ರಯೋಜನಗಳಿಲ್ಲದಾಗಲೂ ಸ್ವಾಂವಜ್ಜನಂಥ ಹಿರಿಯನ ಬಾಳಿನಲ್ಲಿ ದೇಸಗತಿಯ ಅಭಿಮಾನ ಯಾಕೆ ಪ್ರಾಮುಖ್ಯತೆ ಪಡೆಯುತ್ತದೆ ಎನ್ನುವುದು ಅಚ್ಚರಿ ಹುಟ್ಟಿಸುತ್ತದೆ. ದೇಸಗತಿಯನ್ನು ಕಟ್ಟಿದವರೇ (ದೇಸಾಯಿ, ಭಟ್ಟ ಬಳಿಕ ರಗತಸೇವಾವ್ರತದವನೂ ಕೂಡ) ಬಿಟ್ಟು ಹೋದಾಗಲೂ, ಧರಮನಟ್ಟಿಯ ಗುಡ್ಡದ ಜಾಗ ಜನರಿಗೆ ಹಂಚಿಕೆಯಾದರೂ 'ಸೂರ್ಯ ಚಂದ್ರಾಮ ಇರುವ ತನಕಾ' ಶಾಶ್ವತವಾಗಿ ನಿಲ್ಲುವ ದೇಸಗತಿ ಯಾವುದು? ಇದು ಮನುಷ್ಯ ಮತ್ತು ನಂಬಿಕೆಗಳ ಸಂಬಂಧದ ಕುರಿತು ಯೋಚಿಸುವಂತೆ ಮಾಡುತ್ತದೆ. ಸ್ವಾಂವಜ್ಜನ ಕೈ ಹಿಡಿದವಳು ಒಂದು ಸಂದರ್ಭದಲ್ಲಿ ಗಂಡನನ್ನು ಕೇಳುತ್ತಾಳೆ : ಮಿಥ್ಯಾತ್ವಕ್ಕೂ (ಹಿಂದೂ ದರ್ಶನ),

ಸಲ್ಲೇಖನಕ್ಕೂ ಎಲ್ಲಿಂದೆಲ್ಲಿಯ ಹೊಂದಾಣಿಕೆ?' ಅದಕ್ಕೆ ಸ್ವಾಂವಜ್ಜನ ಉತ್ತರ 'ಒಂದು ಮುಗಳನಗೀ'. ಆದರೆ ಕಥೆ ಅದಕ್ಕಿಂತ ಹೆಚ್ಚಿನದೇನನ್ನೋ ನಿರೀಕ್ಷಿಸುತ್ತದೆ.

'ತೇರು' ಕಾದಂಬರಿಗೆ 'ಆಧುನಿಕ ಪುರಾಣ' ಎಂಬ ಉಪಶೀರ್ಷಿಕೆ ಸೂಚಿಸಿದವರು ಚಿತ್ತಾಲರು. ಒಂದು ಜನ ಸಮೂಹದ ನಂಬಿಕೆ, ತಿಳಿವಳಿಕೆ, ಅರ್ಥೈಸಲಾಗದ್ದನ್ನು ಅರ್ಥೈಸುವ ಸಾಹಸ, ಅದು ಸತ್ಯವೆಂದು ಸಾಧಿಸಲು ಸೃಷ್ಟಿಸುವ ಸುಳ್ಳುಗಳು, ಅದರ ಮುಗ್ಧತೆ.. ಎಲ್ಲವೂ ಒದಗಿ ಬಂದು ಒಂದು ಪೌರಾಣಿಕವೆನ್ನಬಹುದಾದ ಆವರಣ ಸೃಷ್ಟಿಗೊಳ್ಳುತ್ತದೆ. ಧರಮನಟ್ಟಿಯನ್ನಾಳಿದ ದೇಸಗತಿಯ ದೇಸಾಯರ ಕನಸುಗಳ ಸಂಕೇತವಾಗಿ ಸಜ್ಜುಗೊಂಡ ರಥ ಜನರ ನಂಬಿಕೆಯಲ್ಲಿ ಘನವಾಗಿ ಬೆಳೆಯುತ್ತ, ಚಲಿಸುತ್ತ ಪ್ರತಿವರ್ಷದ ಉತ್ಸವಕ್ಕೆ, ಉತ್ಸಾಹಕ್ಕೆ ನಿಮಿತ್ತವಾಗಿತ್ತು. ಅಂದು ದೇಸಗತಿಯ ಪ್ರತಿಷ್ಠೆಯ ಸಂಕೇತವಾಗಿದ್ದ ತೇರು ಇಂದು ಚಲನೆ ಕಳೆದುಕೊಂಡು ನಿಂತಿದೆ. ಹಿಂದುಳಿದ ಕಾಟುಗರ ಜಾತಿಯ ಎಳೆ ಹುಡುಗನ ಹಸಿರಗತ, ಮುಂದೆ ಸಾಂಕೇತಿಕವಾಗಿಯೂ ಆ ಕುಟುಂಬದವರ ರಗತ ತಿಲಕ ಪಡೆದೇ ಚಲಿಸಿದ ರಥದ ಚಕ್ರಗಳು ಈಗ ಚಲಿಸಲಾರದೆ ನಿಂತಿವೆ. ಅದಕ್ಕೆ ಕಾರಣವಾಗುವವನೂ ಅದೇ ಕುಟುಂಬದ ವ್ಯಕ್ತಿಯೇ. ಅಲ್ಲಿಗೆ ಪುರಾಣ ಒಂದು ಸುತ್ತು ರಥಸವಾರಿ ಗೈದು 'ಮುಂದೇನು?' ಎಂಬಂತೆ ನಿಂತಿದೆ. ಅದಿನ್ನು ಹಿಂದಿನ ರಥ ಬೀದಿಯಲ್ಲಿ ನಡೆಯಲಾರದು.

'ತೇರು' ಒಂದು ಬಗೆಯಲ್ಲಿ ಬದಲಾದ ನಿಷ್ಠೆಯ ಕಥೆಯನ್ನು ಹೇಳುತ್ತದೆ ಎಂದೂ ಹೇಳಬಹುದು. ಹೊಟ್ಟೆಯ ಹಸಿವೂ ಕಾರಣವಾಗಿ, 'ಸ್ವಾಮಿ ಕೊಟ್ಟಿದ್ದು ಸ್ವಾಮಿಗೇ ಅರ್ಪಿತವಾಗಲಿ' ಎಂದು ಹಳೆಯ ತಲೆಮಾರಿನ ದ್ಯಾವಪ್ಪ ತನ್ನ ಮಗುವನ್ನು ರಥದ ಗಾಲಿಯಡಿಗರ್ಪಿಸಿದ್ದ. ಅವನ ಬದುಕು–ಕಣ್ಣಿಗೆ ಕಾಣದ, ಆದರೆ ಕಣ್ಣಿಗೆ ಕಾಣುವ ಎಲ್ಲವನ್ನೂ ನಿಯಂತ್ರಿಸುವ ದೇವರ ಮೇಲೆ ಅಖಂಡ ವಿಶ್ವಾಸವಿಟ್ಟು ಮುಂದುವರಿಯಿತು. ಅಂಥ ದೇವರ ಕೃಪೆಗೆ ಒಳಗಾಗಲು ತಾನು ಶುದ್ಧಗೊಳ್ಳುವುದು ಹೇಗೆಂಬುದೇ ಬರಬರುತ್ತ ಆತನ ನಿತ್ಯದ ಗೀಳಾಯಿತು. ಕೆಲ ತಲೆಮಾರುಗಳ ಕಾಲ ಈ ನಿಷ್ಠೆ, ನಂಬಿಕೆಗಳು ಕ್ರಮಬದ್ಧವಾಗಿಯೇ ಮುಂದುವರಿದು ಕ್ರಮೇಣ ಅದಕ್ಕೆ ನಾಟಕದ ಕೃತಿಮ ಆಚರಣೆಯ ಅಂಶಗಳು ಸೇರಿಕೊಂಡವು. ಕಿರಿಯ ದ್ಯಾವಪ್ಪನಿಗೆ ಅವನೊಳಗೆ ಉರಿಯುವ ಪ್ರಶ್ನೆ, ಸಂದೇಹಗಳೇ ಅವನ ಬಾಳಗತಿಯನ್ನು ನಿರ್ಧರಿಸುವ ಸಂಗತಿಗಳಾದವು. ನಂಬಿಕೆ ಪ್ರಶ್ನೆಗಳನ್ನು ತಾಳಿಕೊಳ್ಳಲಾರದು, ಪ್ರಶ್ನಾತೀತವಾದದ್ದದು. ನಂಬಿಕೆಗಳು ಛಿದ್ರಗೊಂಡ ದ್ಯಾವಪ್ಪನದೋ

ಸುಲಭ ಪರಿಹಾರಗಳಿಲ್ಲದ ಕಲ್ಲು ಮುಳ್ಳಿನ ಹಾದಿ. ತನ್ನ ಬದುಕಿನ ಮೌಲ್ಯಗಳನ್ನೂ, ಹಾದಿಯನ್ನೂ ಹಾದಿಯ ಗುರಿಯನ್ನೂ ಅವನೇ ಕಂಡುಕೊಳ್ಳಬೇಕು. ಸಹಜೀವಿಗಳ ಸೇವೆಯಲ್ಲಿ ಅಂಥದೊಂದು ಸಾರ್ಥಕ ಬಾಳಿನ ರೇಖೆಯನ್ನು ಕಂಡುಕೊಂಡು ದ್ಯಾವಪ್ಪ ತನ್ನ ನಿಷ್ಠೆಯ ಕೇಂದ್ರವನ್ನು ಬದಲಿಸಿದ್ದಾನೆ. ಅದು ಅವನು ಬದುಕುತ್ತಿರುವ ಸಂದೇಹವಾದಿ ಯುಗದ ಪ್ರಮುಖ ದರ್ಶನವೂ ಹೌದು. ಅಲ್ಲಿ ದೇವರು ಅಪ್ರಸ್ತುತಗೊಂಡಿದ್ದಾನೆ. ದೇವರಿಲ್ಲವಾದ್ದರಿಂದ ರಥವೂ ಇಲ್ಲ, ರಥವಿಲ್ಲವಾದ್ದರಿಂದ ಸಮೂಹ ಸಂಭ್ರಮವೂ ಇಲ್ಲ. ದ್ಯಾವಪ್ಪನಂಥವರು ಕಾಣುತ್ತಿರುವ ಬದುಕಿನ ವಾಸ್ತವ ನಿರ್ಗತಿಕರಿಂದ, ನಿಲುವಿಲ್ಲದ ನೋವಿನಿಂದ ತುಂಬಿಹೋಗಿದೆ. ಅದನ್ನು ಕಿಂಚಿತ್ತಾದರೂ ಬದಲಿಸಬೇಕೆಂಬುದೇ ಅವರ ಪ್ರೀತಿಪೂರ್ವಕ ಕಾಳಜಿ. ಸಾಮಾಜಿಕ ತಿಳಿವಳಿಕೆಯ ವಿವಿಧ ಹಂತಗಳನ್ನು ತೋರುತ್ತಲೇ ಕಾದಂಬರಿ ದ್ಯಾವಪ್ಪನ ದರ್ಶನವನ್ನು ತನ್ನ ಪ್ರಮುಖ ನೆಲೆಯಾಗಿಸಿಕೊಂಡಿದೆ ಅನಿಸುತ್ತದೆ.

'ತೇರು' ಅನೇಕ ಬಗೆಯ ವ್ಯಾಖ್ಯಾನಗಳಿಗೆ ಕಾರಣವಾಗಬಲ್ಲ ಕಾದಂಬರಿ. ಪಾಟೀಲರ ಇಷ್ಟು ವರ್ಷಗಳ ಸೃಜನಶೀಲತೆಯ ನಿರಂತರ ಕೃಷಿಯ ಪೂರ್ಣಫಲವನ್ನು ಪಡಕೊಂಡ ಕೃತಿ ಎಂದು ಹೇಳಬಹುದು.

******

ವಿಮರ್ಶಾ ಸ್ಪಂದನ

'ತೇರು' ಕಾದಂಬರಿಯ ಕುರಿತು ಡಾ.ಎಚ್.ಎಸ್.ವೆಂಕಟೇಶ ಮೂರ್ತಿಯವರು ಕವಿತೆಯ ರೂಪದಲ್ಲಿ ನೀಡಿದ ಸ್ಪಂದನ.

ತೇರು ಅಂದರೆ ತೇರು; ಧರಮನಟ್ಟಿಯ ತೇರು
ಒಂದನೇ ಮಜಲಲ್ಲಿ ಆದಿಶೇಷನ ಸ್ಪ್ರಿಂಗು
ಎರಡನೇ ಮಜಲಲ್ಲಿ ಆನೆಗಳ ಆನಿಕೆ.
ಮೂರನೇ ಮಜಲಲ್ಲಿ ಮತ್ಸ್ಯ ಕೂರ್ಮ ವರಾಹ
ಆಹ! ನಾಲ್ಕನೇ ಮಜಲಲ್ಲಿ ಆಕಳು, ಕುದುರಿ
ಐದನೇ ಮಜಲಲ್ಲಿ ಇರಿವ ಕತ್ತಿ ಕಠಾರಿ!

ಆರನೇ ಮಜಲ ಶಿಖರಕ್ಕೆ ಥಳಥಳ ಕಲಶ.
ಇಂಥ ಮಜಲಿನ ತೇರು–ಕಲ್ಲು ಫಲಿಗಳ ತೇರು
ಯಾವ ಕಾಣದ ಕೈಯೊ ಎಳೆಯುತ್ತ ಎಳೆಯುತ್ತ
ಕಲ್ಲು ಹಾದಿಯ ಮೇಲೆ ಕಲ್ಲು ಚಕ್ರವು ಉರುಳಿ
ಕೆಳಗಿಂದು ಮ್ಯಾಲಕ್ಕೆ ಮೇಲು ಮಜಲು ಕೆಳಕ್ಕೆ
ನಿಲ್ಲು ಹಾಂಗಿಲ್ಲಯ್ಯ ಧರಮನಟ್ಟಿಯ ರಥ
ನಿಲ್ಲು ಹಾಂಗೇ ಇಲ್ಲ ರಗುತ ತಿಲಕದ ವ್ರತ!

ಈ ಕೃತಿಗೆ ಹಿರಿಯ ವಿಮರ್ಶಕ ಡಾ.ಸಿ.ಎನ್.ರಾಮಚಂದ್ರನ್ ಅಧ್ಯಯನ ಪೂರ್ಣ ಮುನ್ನುಡಿ ಬರೆದಿದ್ದಾರೆ. ಅವರಿಗೆ ಈ ಕೃತಿ 'ದೇಸಗತಿ'ಯ ಊಳಿಗ ಮಾನ್ಯ ವ್ಯವಸ್ಥೆಯನ್ನು ಮತ್ತೊಂದು ಪರಿಪ್ರೇಕ್ಷ್ಯದಿಂದ ಆಳವಾಗಿ ವಿಶ್ಲೇಷಿಸುವ ಪ್ರಯತ್ನವಾಗಿ ಕಾಣಿಸಿದೆ.ಕೃತಿ ನಾಟ್ಯಪೂರ್ಣವಾಗಿ ಸೃಷ್ಟಿಸುವ ಧಾರ್ಮಿಕ ಸಂಕಥನ ಮತ್ತು ಅದರಿಂದ ಪಾರಾಗುವ ಸಾಧ್ಯತೆಗಳ ಕುರಿತ ಚರ್ಚೆ ಅಲ್ಲಿದೆ. 'ತೇರ ಬೆನ್ನಿಗೆ ನಿಂತು' ಬರೆದಿರುವ ಪುರುಷೋತ್ತಮ ಬಿಳಿಮಲೆಯವರು ಈ ಕೃತಿ ನಮ್ಮ ಕಾಲದ ಪತನಮುಖೀ ಮೌಲ್ಯಗಳ ಸಂಕೇತವಾಗಿ ಬೆಳೆಯುವ ಪರಿಯನ್ನು ತೋರಿದ್ದಾರೆ. "ಇಲ್ಲಿಯ ಭಾಷೆ ಸರ್ವಮೂಲ ಪಡಿಪದಾರ್ಥಗಳನ್ನು ಉಪಬೃಂಹಣ ಮಾಡುವ" ಕುರಿತು ಬ್ಲರ್ಬ್ ನಲ್ಲಿ ಶ್ರೀ ಮಲ್ಲೇಪುರಂ ಜಿ.ವೆಂಕಟೇಶ್ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಶ್ರೀ ತಿರುಮಲೇಶ್ ಕೂಡ "ತೇರು: ಒಂದು ಐತಿಹ್ಯದ ನಿರಚನೆ" ಲೇಖನದಲ್ಲಿ ಪಾಟೀಲರು ಬಳಸುವ ಪ್ರಾದೇಶಿಕ ಕನ್ನಡದ ವ್ಯಂಜನ ಶಕ್ತಿಯೆಡೆ ಗಮನ ಸೆಳೆದಿದ್ದಾರೆ. ತೇರು ಕೃತಿಯ ಕುರಿತು ಅದು ಪ್ರಕಟವಾದ ಸಂದರ್ಭದಲ್ಲಿ ನಾನು ಬರೆದ ಪತ್ರಿಕಾ ವಿಮರ್ಶೆಯೂ ಸೇರಿದಂತೆ ("ಬದಲಾದ ನಿಷ್ಠೆಯ ಆಧುನಿಕ ಪುರಾಣ") ಅನೇಕ ಬರಹಗಳು ಬಂದಿವೆ. ಇಲ್ಲಿ ಕೆಲ ಅಭಿಪ್ರಾಯಗಳನ್ನು ಮಾತ್ರ ಪ್ರಸ್ತಾಪಿಸಲಾಗಿದೆ.

ಶ್ರೀ ಸಿ.ಎನ್.ರಾಮಚಂದ್ರನ್ ಅವರು ಪಾಟೀಲರನ್ನು 'ನವ್ಯೋತ್ತರ ಕತೆಗಾರ'ನೆಂದು ಕರೆದುದು ಕೇವಲ ಕಾಲಸೂಚಕವಾಗಿ ಅಲ್ಲ ಎಂದು ವಿವರಿಸುತ್ತಾರೆ. "ನಾನು ಗ್ರಹಿಸಿರುವಂತೆ ಕನ್ನಡ ಸಣ್ಣಕಥೆ ನವ್ಯಯುಗದಲ್ಲಿ ಒಂದು ದಿಕ್ಕಿನಲ್ಲಿ ಅದ್ಭುತವಾಗಿ ಬೆಳೆಯಿತು–ನವ್ಯ ಕಾವ್ಯಕ್ಕೆ ಸರಿಸಾಟಿಯಾಗಿ. (ನವ್ಯ ಸಾಹಿತ್ಯದಲ್ಲಿ ಪ್ರತಿಯೊಂದು ಪ್ರಭೇದವೂ 'ಕಾವ್ಯ'ದ ಮತ್ತೊಂದು ರೂಪವೇ ಆಗಿತ್ತು; ಅಥವಾ ಆಗಿರಬೇಕು ಎಂಬುದು ನವ್ಯಲೇಖಕರ ನಿಲುವಾಗಿತ್ತು ಎಂಬುದು ಇಂದು ಎಲ್ಲರಿಗೂ ಗೊತ್ತಿರುವ ವಿಷಯ). ಈ ನಿಲುವಿಗೆ ವಿರುದ್ಧವಾಗಿ

ನವ್ಯೋತ್ತರ ಕಥನ ಸಾಹಿತ್ಯ ಮತ್ತೊಂದು ದಿಕ್ಕಿನಲ್ಲಿ–ಸಮಷ್ಟಿ ಚಿಂತನೆ, ಅಂತಃ ಶಿಸ್ತೀಯ ಸಾಮಾಜಿಕ ಗ್ರಹಿಕೆ, ಭ್ರಮೆ–ವಾಸ್ತವಗಳ ಮಿಶ್ರಣ ಇತ್ಯಾದಿಗಳ ದಿಕ್ಕಿನಲ್ಲಿ–ಕಥನ ಸಾಹಿತ್ಯದ ಸಾಧ್ಯತೆಗಳನ್ನು ಆಳವಾಗಿ ಶೋಧಿಸಲು ತೊಡಗಿತು" (ಸಿ.ಎನ್.ಆರ್.ಮುನ್ನುಡಿ) ಈ ಹಿನ್ನೆಲೆಯಲ್ಲಿ 'ತೇರು' ಕೃತಿ ಒಂದು ಜಾನಪದ/ಜನಾಂಗಿಕ ಅಧ್ಯಯನವೂ ಹೌದೆಂದು ಅವರು ತಿಳಿಯುತ್ತಾರೆ.ಊಳಿಗಮಾನ್ಯ ವ್ಯವಸ್ಥೆಗೆ ಅಧಿಕಾರಕೊಡುವ ಧಾರ್ಮಿಕ ಸಂಕಥನ, ಅದು ತಾನು ಬಲಗೊಳ್ಳುತ್ತ ವ್ಯವಸ್ಥೆಗೆ ಬಲಕೊಡುವುದು ಈ ಪ್ರಕ್ರಿಯೆಯನ್ನು 'ಅದ್ಭುತ ನಿರೂಪಣಾಕ್ರಮ'ದಿಂದ ತೇರು ನಿರೂಪಿಸಿದೆ ಎಂದು ಸಿ.ಎನ್.ಆರ್.ಹೇಳುತ್ತಾರೆ. ಕೃತಿಯಲ್ಲಿ ಅನೇಕ ನಿರೂಪಕರು ಮಾತ್ರವಲ್ಲ, ಅನೇಕ ಶೈಲಿಯ/ಧಾಟಿಯ ನಿರೂಪಣೆಗಳೂ ಇವೆ. "ಮುಖ್ಯ ನಿರೂಪಕನ ವಸ್ತುನಿಷ್ಠ ಧ್ವನಿ, ಸ್ವಾಂವಜ್ಜನ ಹಳಹಳಿಕೆಯ ಹಾಗೂ ಕಳಕಳಿಯ ಧ್ವನಿ, ಗೊಂದಲಿಗರ ಶೈಲೀಕೃತ ಮತ್ತು ಕಥನೋತ್ಸಾಹದ ಧ್ವನಿ, ಕೊನೆಯ ತಲೆಮಾರಿನ ದ್ಯಾವಪ್ಪನ ಹತಾಶ ಧ್ವನಿ.. ಇವೆಲ್ಲವೂ ಒಂದೆಡೆ ಬಂದು, ನಿರೂಪಣೆಯ ನೆಲೆಯಲ್ಲಿ ಮೌಲಿಕ ಬಹುಧ್ವನಿತ್ವ ತೇರು ಕೃತಿಗೆ ಲಭಿಸಿದೆ" (ಸಿ.ಎನ್.ಆರ್.ಮುನ್ನುಡಿ). ಹೀಗೆ ಭಿನ್ನ ನಿರೂಪಣಾಕ್ರಮಗಳ ಮೂಲಕ ಧಾರ್ಮಿಕ ಸಂಕಥನದ ನಾಟ್ಯೀಕರಣ ಕೃತಿಯಲ್ಲಿದೆ ಎಂದು ರಾಮಚಂದ್ರನ್ ವಿಶ್ಲೇಷಿಸುತ್ತಾರೆ.

ಇಂಥ ಸಂಕಥನಗಳಿಂದ ಬಿಡುಗಡೆಗೊಳ್ಳಲು ಎರಡು ದಾರಿಗಳನ್ನು 'ತೇರು' ಕೃತಿ ತೋರುತ್ತದೆ ಎನ್ನುತ್ತಾರೆ ಸಿ.ಎನ್.ಆರ್. ಮೊದಲ ಸಾಧ್ಯತೆಯು ಮೊದಲ ದ್ಯಾವಪ್ಪನದು. ಅದು ಸಂಕಥನಕ್ಕೆ ಸಂಪೂರ್ಣ ಶರಣಾಗುವುದರ ಮೂಲಕವೇ ಅದನ್ನು ಮೀರುವುದು! 'ರಕ್ತಶುದ್ಧಿ' ಮಾಡಿಕೊಂಡು ಪರಿಶುದ್ಧನಾಗುವ, ಪವಿತ್ರನಾಗುವ ದ್ಯಾವಪ್ಪನಿಗೆ "ಈ ಪೃಥುವೀ ಅಂಬುದರ ಮ್ಯಾಲೆ ಶಿವ ಹೆಂಗೆ ಕಾಣುಸತಿದ್ದಾನೂ.." ಎಂಬ ಸೋಜಿಗಸಾಧ್ಯ. 'ಇದು ನಾಮದೇವ, ತುಕಾರಾಮ ಮುಂತಾದ ಸಂತರಿಗಿರುವ ಸಾಧ್ಯತೆ' ಎಂದು ಸಿ.ಎನ್.ಆರ್. ಹೇಳುತ್ತಾರೆ.

ಇನ್ನೊಂದು ಸಾಧ್ಯತೆ ಹೊಸಕಾಲದ ದ್ಯಾವಪ್ಪನದು. ಬದಲಾದ ಸಾಮಾಜಿಕ–ರಾಜಕೀಯ ಪರಿಸ್ಥಿತಿಯಲ್ಲಿ ತ್ಯಾಗಕ್ಕಾಗಿ, ದೀನ ದುಃಖಿಗಳ ಸೇವೆಗಾಗಿ ತನ್ನನ್ನು ಸಂಪೂರ್ಣ ಅರ್ಪಿಸಿಕೊಳ್ಳುವುದು– ಬಾಬಾ ಆಮ್ಟೆ, ಮದರ್ ತೆರೆಸಾ ಅವರಂತೆ.

ಆದರೆ ಈ ಎರಡೂ ಆಯ್ಕೆಗಳೂ ಸಾಧ್ಯವಿಲ್ಲದ ಅಸಂಖ್ಯಾತ ಜನ ಸಾಮಾನ್ಯರು

"ಆಧುನಿಕತೆ, ರಾಷ್ಟ್ರ, ಸ್ವಧರ್ಮ.. ಇತ್ಯಾದಿ ಒಂದಲ್ಲಾ ಒಂದು ಸಂಕಥನದ ಒಳಗೇ ಇರಬೇಕಾಗುತ್ತದೆ–ಬೃಹತ್ ಗಾತ್ರದ ತೇರನ್ನು ಎಳೆಯುತ್ತಾ ಅಥವಾ ಅದರ ಕಲ್ಲಿನ ಗಾಲಿಗಳು ನಿಷ್ಕರುಣೆಯಿಂದ ಉರುಳುವುದನ್ನು ನಿಷ್ಕ್ರಿಯವಾಗಿ ನೋಡುತ್ತಾ" (ಸಿ.ಎನ್.ಆರ್).

ಡಾ.ಎಚ್.ಎಸ್.ವೆಂಕಟೇಶಮೂರ್ತಿಯವರು ಕೃತಿಯ ರೂಪಕ ಪ್ರತಿಭೆಯ ಕುರಿತು ಆಡುವ ಮಾತುಗಳು ಹೀಗಿವೆ: "ಕಾಲಕಾಲಕ್ಕೆ ಸಂಭವಿಸುವ ಸಾಮಾಜಿಕ–ಸಾಂಸ್ಕೃತಿಕ–ರಾಜಕೀಯ ಪಲ್ಲಟಗಳು ಮನುಷ್ಯ ಜೀವಿತದ ಗುಣಾತ್ಮಕತೆಯ ಮೇಲೆ ಬೀರುವ ಅಪರಿಹಾರ್ಯವೆನಿಸುವ ಪ್ರಭಾವಗಳನ್ನು ರೂಪಕಾತ್ಮಕ ನೆಲೆಯಲ್ಲಿ ಕಟ್ಟಿಕೊಡುವುದು ತೇರು ಕಾದಂಬರಿಯ ವೈಶಿಷ್ಟ್ಯ. ಮಾನವ ಜೀವಿತವೇ ಈ ಪಲ್ಲಟಗಳನ್ನು ಗ್ರಹಿಸುವ ಗ್ರಾಹಕ ಸಾಮಗ್ರಿಯಾಗುತ್ತದೆ..ಬದುಕಿನ ಸೂಕ್ಷ್ಮಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತದೆ. ಬದುಕಿನ ಪ್ರವಹನಕ್ಕೆ ಆಯಾಕಾಲದಲ್ಲಿ ಕಾರಣವಾಗುವ ಜೀವಶಕ್ತಿಯನ್ನೂ, ಘಾತುಕ ವೃತ್ತಿಯನ್ನೂ ಪಕ್ಷಪಾತರಹಿತವಾಗಿ ಗುರುತಿಸುವುದು ಸಾಧ್ಯವಾಗಿದೆ ಎಂಬುದೇ ಕಾದಂಬರಿಯ ಗುಣಾತ್ಮಕ ಶಕ್ತಿ".

ಡಾ.ಕೆ.ಮೋಹನ್ ಕೃಷ್ಣರೈ ಅವರ 'ಚರಿತ್ರೆ ವರ್ತಮಾನದ ಕಥನ" (ಹೊಸತು ಮಾಸಪತ್ರಿಕೆ, ಜೂನ್ ೨೦೦೮), ಕುಮಾರ.ಕೆ ಅವರ 'ವರ್ತಮಾನದಲ್ಲಿ ಭೂತ (ಸಂವಾದ, ಮಾರ್ಚ್ ೨೦೦೫), ಮಲ್ಲೇಪುರಂ ಅವರ "ತೇರು–ಕನ್ನಡಕ್ಕೊಂದು ವಿಶಿಷ್ಟ ಕಾದಂಬರಿ"(ಹಸಿರು ಕ್ರಾಂತಿ,ಅಗಸ್ಟ್ ೨೦೦೬) 'ತೇರು' ಕುರಿತು ಪ್ರಕಟವಾಗಿರುವ ಇನ್ನಷ್ಟು ಬರಹಗಳು.

'ಅರುಹು–ಕುರುಹು' ಪತ್ರಿಕೆಯಲ್ಲಿ ಪ್ರಕಟವಾಗಿರುವ ಎಸ್.ಸಿರಾಜ್ ಅಹಮದ್ ಅವರ "ಪರಂಪರೆ ಆಧುನಿಕತೆಗಳ ನಡುವೆ ರಾಘವೇಂದ್ರ ಪಾಟೀಲರ ತೇರು" – ಈ ಕೃತಿಯ ಕುರಿತು ಬಂದಿರುವ ಮಹತ್ವದ ಬರಹಗಳಲ್ಲಿ ಒಂದು. "ಮೇಲು ನೋಟಕ್ಕೆ ಎರಡು ತಲೆಮಾರುಗಳ ಸಂಘರ್ಷದ ಕತೆಯಂತೆ ಕಂಡರೂ ಈ ಕೃತಿಯು ಸಂಘರ್ಷಕ್ಕಿಂತ ತಲೆಮಾರುಗಳ ನಡುವಿನ ಸ್ಥಿತ್ಯಂತರದ ಕತೆಯನ್ನು ಹೇಳುವಂತಿದೆ" ಎನ್ನುವ ಸಿರಾಜ್ ಕೆಲ ಮುಖ್ಯ ಪ್ರಶ್ನೆಗಳನ್ನು ಕೇಳಿಕೊಂಡಿದ್ದಾರೆ: "ತೇರು ಪುರಾಣಭಂಜಕ ಕೃತಿಯೇ? ಅದು ಪರಂಪರೆಯ ಅಪಮೌಲೀಕರಣ, ಆಧುನಿಕತೆ–ಪರಂಪರೆಗಳ ನಡುವಿನ ಸಂಘರ್ಷವನ್ನು ಚಿತ್ರಿಸುತ್ತದೆಯೇ? ಹಾಗಿದ್ದರೆ ಅದು ಸೂಚಿಸುವ ಪರ್ಯಾಯ ಮಾರ್ಗದ ಸಾಧ್ಯತೆಗಳೇನು?

ಪರಂಪರೆಯ ಮೌಲ್ಯ ಜಗತ್ತನ್ನು ಪ್ರಶ್ನಿಸುವ ಆಯಾಮ ಎಷ್ಟು ಪರಿಣಾಮಕಾರಿಯಾಗಿ ಮೂಡಿ ಬಂದಿದೆ?". ಹಾಗೇ 'ಹಲವು ತಲೆಮಾರುಗಳ ಪಲ್ಲಟದ ಕಥೆಯನ್ನು ಹೇಳ ಹೊರಟಿರುವ ಕಾದಂಬರಿಯ ವೇಗ ಬಹಳ ದೊಡ್ಡದು' ಎನ್ನುವ ಅವರು ಸಾಮಾಜಿಕ ಪರಿವರ್ತನೆಯ ಗ್ರಹಿಕೆ, ಅನುಭವದ ದಟ್ಟ ವಿವರಗಳ ಕುರಿತೂ ಸಮಸ್ಯೆಗಳಿವೆ ಎನ್ನುತ್ತಾರೆ. ಹಲವು ದಿಕ್ಕುಗಳಲ್ಲಿ ಬೆಳೆಯಬಹುದಾಗಿದ್ದ ಸಾಮಾಜಿಕ ಕಥನ ಬಡವಾದ ಹಾಗಿದೆ ಎನ್ನುವ ಸಿರಾಜ್ ರ ಅಭಿಪ್ರಾಯದೊಡನೆ ಸಿ ಎನ್ ಆರ್ ಈ ಕೃತಿಯ ಬಹುಮುಖೀ ನಿರೂಪಣೆಯ ಅನನ್ಯ ಸಾಧನೆ ಕುರಿತು, ಎಚ್ ಎಸ್ ವಿ ಈ ಕೃತಿಯ ರೂಪಕಾತ್ಮಕ ನೆಲೆಯ ಕುರಿತು ಆಡುವ ಮಾತುಗಳನ್ನು ಗಮನಿಸಿದಾಗ ಈ ಕೃತಿಯ ಕುರಿತು ಸಾಧ್ಯವಿರುವ ಹಲವು ಓದುಗಳ ಕುರಿತು ಕುತೂಹಲವುಂಟಾಗುತ್ತದೆ. 'ವಾಸ್ತವವಾದ'ದ ಅತಿ ವಾಸ್ತವತೆಗೆ ಬೇಸತ್ತ ಪಾಟೀಲರಂಥ ಕಥೆಗಾರರು ಕಥನದ ವಿಭಿನ್ನ ಸಾಧ್ಯತೆಗಳನ್ನು ಶೋಧಿಸುತ್ತಲೂ ಇದ್ದಾರೆ. ಎಲ್ಲ ಸಿದ್ಧಾಂತಗಳನ್ನೂ ವೈಚಾರಿಕ ಚೌಕಟ್ಟುಗಳೆಂದು, ಬಂಧನಗಳೆಂದು ತಿಳಿಯುವ ಪಾಟೀಲರು (ಇದು ನನ್ನ ಗ್ರಹಿಕೆ) ಸೃಷ್ಟಿಸಿರುವ ಈ 'ಆಧುನಿಕ ಪುರಾಣ'ವು ಪುರುಷೋತ್ತಮ ಬಿಳಿಮಲೆಯವರು ಹೇಳುವಂತೆ 'ನಮ್ಮ ಕಾಲದ ಪತನಮುಖೀ ಮೌಲ್ಯಗಳ ಸಂಕೇತ'ವಾಗಿ ನಿಂತಿದೆ. "ತಲೆಮಾರುಗಳ ಸ್ಥಿತ್ಯಂತರದ ಕಾದಂಬರಿಯ ಕಥನ ವ್ಯಕ್ತಿಗಳ ಪಲ್ಲಟಗಳನ್ನು ಮಾತ್ರ ತೋರಿಸುತ್ತಿದೆಯೆ?" ಎಂಬ ಪ್ರಶ್ನೆಯನ್ನೇ ತೆಗೆದುಕೊಳ್ಳೋಣ.ಸ್ಥಿತ್ಯಂತರದ ಪ್ರಕ್ರಿಯೆಯಲ್ಲಿ ಇಡೀ ಜನಾಂಗವೇ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾ ಪೂರ್ವಕವಾಗಿಯೋ ಭಾಗವಹಿಸಲೇಬೇಕಾಗಿದೆ. ಹೊಸ ದ್ಯಾವಪ್ಪನ ತೀವ್ರತೆ ಅವನದೇ ವಯಸಿನ ಇತರ ಹುಡುಗರಲ್ಲಿ ಕಾಣದಿರಬಹುದು. ಆದರೆ ಅವನು ಪಾಲುಗೊಂಡ ಜೆ.ಪಿ.ಚಳುವಳಿ ಅಂಥ ಉತ್ಸಾಹಿ ಯುವಕರಿಂದಲೇ ಕೂಡಿತ್ತು! ಮೊದಲ ತಲೆಮಾರಿನ ದ್ಯಾವಪ್ಪನಂಥವರ ಧಾರ್ಮಿಕ ನಂಬಿಕೆ, ಶ್ರದ್ಧೆಗಳಿಗೂ ಹೊಸಕಾಲದ ಧಾರ್ಮಿಕ ಶ್ರದ್ಧೆಗೂ ನಡುವೆ ಸಾಕಷ್ಟು 'ಪತನಮುಖಿ' ಲಕ್ಷಣಗಳಿವೆ. ಇದು ಕೇವಲ ಕೆಲ ವ್ಯಕ್ತಿಗಳ ಪಲ್ಲಟದ ಕಥೆಯಲ್ಲ. ಪ್ರತಿಷ್ಠೆಯ, ಶಕ್ತಿಯ ಸಂಕೇತವಾಗಿ ಧರಮನಟ್ಟಿಯ ಜಾಗವನ್ನು ಸರ್ಕಾರ 'ತನ್ನ ತಾಬೇ ತಗೊಂಡು' ಭೂಮಿಯಿಲ್ಲದವರಿಗೆ ಹಂಚಿದೆ. ಜನರೂ ಪಡೆದಿದ್ದಾರೆ! ಇಂಥ ಎಲ್ಲ ಸ್ಥಿತ್ಯಂತರಗಳೂ ಹತ್ತು ಹಲವು ಮನಸ್ಥಿತಿಗಳ, ದೃಷ್ಟಿಧೋರಣೆಗಳ ಕಥನಗಳಾಗಿರುತ್ತವೆ. ಒಂದೆಡೆ ಸ್ವಾಂವಜ್ಜ, ಇನ್ನೊಂದೆಡೆ ದ್ಯಾವಪ್ಪ, ಮತ್ತೊಂದೆಡೆ ಗೊಂದಲಿಗರು, ಸಾಮಾನ್ಯಜನ, ನಿರೂಪಕ..ಹೀಗೆ ಇಡೀ ಪರಿಸರದ ಸಮ್ಮಿಶ್ರಿತ ಭಾವನೆಗಳಿಗೆ ದನಿಯಾಗುವ ತೇರು ತನ್ನ ಏಕಸೂತ್ರತೆಯಲ್ಲೂ, 'ಪರಿಸರ'ದ ಸಮುದಾಯದ ಸಂಕಟಗಳನ್ನು ತೋರಬಲ್ಲುದಾಗಿದೆ. (ಅಂದರೆ ಸ್ವಾಂವಜ್ಜ ಧರಮನಟ್ಟಿಯ ವಿವೇಕ ಪ್ರಜ್ಞೆ ಏನಲ್ಲ, ಆದರೆ ಕೃತಿಯಲ್ಲಿ ಅವನದೂ ಒಂದು 'ಮುಖ್ಯ

ಗ್ರಹಿಕೆ'.) ಕೃತಿಯ ಧಾರ್ಮಿಕ ಸಂಕಥನದ ಭಾಗಗಳು, ಮೊದಲ ದ್ಯಾವಪ್ಪನ ಪರಿಶುದ್ಧೀಕರಣದ ಪ್ರಯತ್ನಗಳ ಕುರಿತಾಗಿಯೂ ಸಿರಾಜ್ ರ ಅಭಿಪ್ರಾಯಗಳನ್ನು ಸಿ.ಎನ್.ಆರ್. ಅಭಿಪ್ರಾಯಗಳೊಡನೆ ಮುಖಾಮುಖಿಯಾಗಿಸಿ ನೋಡಬಹುದಾಗಿದೆ.

ಇನ್ನು ಈ ಕೃತಿ ತೋರಬೇಕಾಗಿದ್ದ ಪರ್ಯಾಯ ದರ್ಶನದ ಕುರಿತಾದ ಮಾತು. ದ್ಯಾವಪ್ಪ ದೇವರ ಬಗ್ಗೆ ಮಾತ್ರವಲ್ಲ, ರಾಜಕೀಯದ ಕುರಿತೂ ನಂಬಿಕೆ ಕಳೆದುಕೊಂಡವನು. ಅವನ ಆರ್ತ ಪ್ರಶ್ನೆ ಎಂದರೆ: "...ಅಲ್ಲರೀ ನಮ್ಮ ವ್ಯವಸ್ಥಾದಾಗ ಬಡವರು ಮರ್ಯಾದಿಂದ ಬದಕೂ ಹಾದಿ ಹೇಳಿರಿ.. ಹಳ್ಯಾಗಿನ ಗೌಡರೂ–ಕುಲಕರ್ಣ್ಯಾರು–ಜಮೀನದಾರರು ಮತ್ತು ಜಾತ್ಯಸ್ಥರೂ ಮಾಡತಿರೂ ಹಂತಾ ದಂಡಾವರ್ತೀ ಬಗ್ಗೆ ವಿಚಾರ ಮಾಡಿರಿ.. ನಮ್ಮಂಥಾ ಹುಡುಗೋರಿಗೆ ಕೆಲಸ ಇಲ್ಲದ್ದರ ಬಗ್ಗೆ ಹೇಳಿರೀ.." ಈ ಹಾದಿಯಲ್ಲಿ ಹೊರಟ ದ್ಯಾವಪ್ಪ ಸಾಮಾಜಿಕ ಸೇವೆಯಲ್ಲಿ ಒಂದು ಸಾಧ್ಯತೆಯನ್ನು ಕಂಡುಕೊಂಡಿದ್ದಾನೆ. "ಕಾಯಾ ವಾಚಾ ಮನಸಾ ಸಾಧ್ಯವಾಗದ ಬಂಡಾಯ ನಿರರ್ಥಕವಾದದ್ದು" ಎನ್ನುವ ದ್ಯಾವಪ್ಪ, ಸಿರಾಜ್ ಹೇಳುವಂತೆ 'ಆಧುನಿಕ ಕಾಲದ ಏಕಾಂಗಿನಾಯಕ'. ಅವನ ದರ್ಶನದ ಯಶಸ್ಸು ಊಹೆಯ ಸಂಗತಿ.

'ತೇರು' ಕುರಿತು ಭಿನ್ನ ನೆಲೆಗಳಿಂದ ನೋಡುವ ಎರಡು ಪ್ರಬಂಧಗಳನ್ನಿಟ್ಟುಕೊಂಡು ಈ ಭಾಗದ ಬರಹವನ್ನು ಸಿದ್ಧಪಡಿಸಲಾಗಿದೆ. ಪ್ರಕಟವಾಗಿ ಏಳು ವರ್ಷಗಳೇ ಕಳೆದರೂ 'ತೇರು' ವಿಭಿನ್ನ ಪ್ರತಿಕ್ರಿಯೆಗಳನ್ನು ಹುಟ್ಟಿಸುತ್ತಲೇ ಇದೆ ಎಂಬುದು ಅವರ ಹಿರಿಮೆಯಾಗಿದೆ.